BONDED LABOUR SYSTEM (ABOLITION) ACT AND RULES, 1976 IN KANNADA. COMPILED BY Mr. KUSHWANTH KUMAR .T.

Published by:
**Smt. LALITHA**
**for SRI BALAJI BOOK COMPANY,**
No. 640, Jnanabharathi, BDA Layout, Bangalore-560056.

© Publishers

Page : 32

1st Edition: 2015

Price : Rs. 45/-

Marketed by :
**Thyagaraj .V**
**for Tejass Law House**
# 2, Basement, Mourya Mansion, 1st Cross, Gandhinagar,
(Behind Hatric-Sports), Bangalore - 560 009.
**Mob.: 9880442433**

**ನಿರಾಕರಣೆ (Disclaimer)**

ಈ ಕೃತಿಯನ್ನು ಎಷ್ಟೇ ಎಚ್ಚರಿಕೆಯಿಂದ ರಚಿಸಿ ಪ್ರಕಟಿಸಿದ್ದರೂ, ತಪ್ಪುಗಳು ಅಥವಾ ತಪ್ಪು ಸೇರ್ಪಡೆಗಳು ಆಗಿರುವ ಸಾಧ್ಯತೆಗಳಿವೆ. ಆದಕಾರಣ, ಅಂತಹ ಅಚಾತುರ್ಯಗಳು ಓದುಗರ ಗಮನಕ್ಕೆ ಬಂದಲ್ಲಿ, ಸರ್ಕಾರದಿಂದ ರಚಿಸಲ್ಪಟ್ಟ ಮೂಲಕೃತಿಯನ್ನು ಪರಾಮರ್ಶಿಸಬೇಕೆಂದು ಕೋರಲಾಗಿದೆ ಮತ್ತು ಅಂತಹ ತಪ್ಪುಗಳನ್ನು ಸಹೃದಯಿ ಓದುಗರು ಹೆಕ್ಕಿ ತೋರಿಸಿದಲ್ಲಿ, ಮರು ಮುದ್ರಣದಲ್ಲಿ ಸರಿಪಡಿಸಲು ಸಹಕಾರಿಯಾಗುತ್ತದೆ. ಅಲ್ಲದೆ, ಅಂತಹ ಯಾವುದೇ ಲೋಪಗಳಿಗೆ ಲೇಖಕರಾಗಲೀ ಅಥವಾ ಪ್ರಕಾಶಕರಾಗಲೀ ಕಾರಣರಲ್ಲ, ಆದರೂ, ಓದುಗರ ಅಮೂಲ್ಯ ಸಲಹೆಗಳಿಗೆ ಸದಾ ಸ್ವಾಗತವಿದೆ. ಈ ಗ್ರಂಥವನ್ನು ಪ್ರಕಾಶಕರ ಒಪ್ಪಿಗೆ ಇಲ್ಲದೆ ಯಾವುದೇ ಮಾಧ್ಯಮಗಳಿಂದ ಮರುಮುದ್ರಣ ಅಥವಾ ನಕಲು ಮಾಡುವುದನ್ನು ನಿಷೇಧಿಸಲಾಗಿದೆ. ಮತ್ತು ಯಾವುದೇ ವಿವಾದಗಳು ಬೆಂಗಳೂರಿನ ನ್ಯಾಯಾಂಗ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

– ಪ್ರಕಾಶಕರು



# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976

# BONDED LABOUR SYSTEM ABOLITION ACT, 1976

# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976
# BONDED LABOUR SYSTEM ABOLITION ACT, 1976

ಪರಿವಿಡಿ


ಕ್ರ.ಸಂ. ಪು.ಸಂ.

ಪ್ರಾರಂಭಿಕ Preliminary

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
Short title, Extent and Commencement 6
2. ಪರಿಭಾಷೆಗಳು
Definitions 6
3. ಈ ಅಧಿನಿಯಮವು ಮೇಲುಗೈ ಪರಿಣಾಮವನ್ನು ಹೊಂದಿರತಕ್ಕದ್ದು
Act to have over-riding effect 10

ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ
Abolition of Bonded Labour System

4. ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ
Abolition of Bonded Labour System 10
5. ಒಪ್ಪಂದ, ರೂಢಿಗಳು ಮುಂತಾದವು ಅಸಿಂಧುವಾಗುತ್ತವೆ
Agreement, Custom, etc. to be void 11

ಜೀತದ ಋಣವನ್ನು ಮರು ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು
Liability to repay bonded Debt to stand extinguished

6. ಜೀತದ ಋಣವನ್ನು ಮರು ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು
Liability to repay Bonded debt to stand extinguished 11
7. ಜೀತ ಕಾರ್ಮಿಕನ ಸ್ವತ್ತನ್ನು ಅಡಮಾನ ಇತ್ಯಾದಿಗಳಿಂದ ಮುಕ್ತಗೊಳಿಸತಕ್ಕದ್ದು
Property of Bonded Labourer to be freed from mortgage, etc 13
8. ಜೀತಮುಕ್ತನಾದ ಜೀತ ಕಾರ್ಮಿಕನನ್ನು ಹೊಲಮನೆ, ಮುಂತಾದವುಗಳಿಂದ ಹೊರದೂಡತಕ್ಕದ್ದಲ್ಲ
Freed Bonded Labourer not to be evicted from homestead, etc 14
9. ಅಳಿದುಹೋದ ಋಣದ ಬಗ್ಗೆ ಸಾಲದಾತನು ಯಾವ ಹಣವನ್ನೂ ಸ್ವೀಕರಿಸತಕ್ಕದ್ದಲ್ಲ
Creditor not to accept payment against extinguished debt 14
10. ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿರ್ದಿಷ್ಟವಾಗಿ ನಿಗದಿಪಡಿಸಬಹುದಾದ ಪ್ರಾಧಿಕಾರಿಗಳು
Authorities who may be specified for implementing the Provisions of this Act 15
11. ಸಾಲ ಸೌಲಭ್ಯವು ದೊರಕುವಂತೆ ನೋಡಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತಿತರ ಅಧಿಕಾರಿಗಳ ಕರ್ತವ್ಯ





Duty of District Magistrate and other Officers to ensure Credit 15
12. ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನಿಂದ ಪ್ರಾಧಿಕಾರ ಪಡೆದ ಅಧಿಕಾರಿಗಳ ಕರ್ತವ್ಯ
Duty of District Magistrate and Officers authorised by him 16
13. ಜಾಗೃತಾ ಸಮಿತಿಗಳು
Vigilance Committees 16
14. ಜಾಗೃತ ಸಮಿತಿಯ ಪ್ರಕಾರ್ಯಗಳು
Functions of Vigilance Committees 18
15. ರುಜುವಾತಿನ ಹೊಣೆ
Burden of Proof 19
16. ಜೀತ ಕಾರ್ಮಿಕ ಪದ್ಧತಿಯ ಆಚರಣೆ ಮಾಡಿದ್ದಕ್ಕಾಗಿ ದಂಡನೆ
Punishment for Enforcement of Bonded Labour 19
17. ಜೀತ ಸಾಲವನ್ನು ಕೊಟ್ಟರೆ ದಂಡನೆ
Punishment for Advancement of Bonded Debt 19
18. ಜೀತ ಕಾರ್ಮಿಕ ಪದ್ಧತಿಯ ಅಡಿಯಲ್ಲಿ ಜೀತ ದುಡಿಮೆಯನ್ನು ಒತ್ತಾಯದಿಂದ ಪಡೆದುಕೊಳ್ಳುವುದಕ್ಕೆ ದಂಡನೆ
Punishment for Extracting Bonded Labour under the Bonded Labour System 19
19. ಜೀತ ಕಾರ್ಮಿಕರಿಗೆ ಅವರ ಆಸ್ತಿಯ ಸ್ವಾಧೀನವನ್ನು ವಾಪಸು ಮಾಡಲು ತಪ್ಪಿದ್ದಕ್ಕಾಗಿ ಅಥವಾ ವಿಫಲನಾದುದಕ್ಕಾಗಿ ದಂಡನೆ
Punishment for Ommission or Failure to restore Possession of Property to Bonded Labourers 20
20. ದುಷ್ಪ್ರೇರಣೆಯು ಅಪರಾಧವಾಗಿರತಕ್ಕದ್ದು
Abetment to bean offence 20
21. ಕಾರ್ಯ ನಿರ್ವಾಹಕ ದಂಡಾಧಿಕಾರಿಯಿಂದ ವಿಚಾರಣೆಗೊಳಪಡಿಸಬಹುದಾದ ಅಪರಾಧಗಳು
Offences to be tried by Executive Magistrates 21
22. ಅಪರಾಧಗಳ ಸಂಜ್ಞೇಯತೆ
Cognizance of Offences 21
23. ಕಂಪನಿಗಳಿಂದ ಅಪರಾಧಗಳು
Offences by Companies 21
24. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
Protection of action taken in Good Faith 22
25. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ
Jurisdiction of Civil Courts barred 22
26. ನಿಯಮ ರಚನಾಧಿಕಾರ
Power to make Rules 22
27. ನಿರಸನ ಮತ್ತು ಉಳಿಸುವಿಕೆ
Repeal and Saving 23

# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976

(1976ರ 19ನೇ ಅಧಿನಿಯಮ)

# BONDED LABOUR SYSTEM ABOLITION ACT, 1976

(Act No. 19 of 1976)

[9ನೇ ಫೆಬ್ರವರಿ, 1967]

ದುರ್ಬಲ ವರ್ಗಗಳ ಜನತೆಯ ಆರ್ಥಿಕ ಮತ್ತು ದೈಹಿಕ ಶೋಷಣೆಯನ್ನು ತಡೆಗಟ್ಟುವ ಉದ್ದೇಶದಿಂದ ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸುವುದಕ್ಕಾಗಿ ರಚಿಸಿದ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಇದು ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

ಅಧ್ಯಾಯ-I - Chapter-I

## ಪ್ರಾರಂಭಿಕ
## Preliminary

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ**
**Short Title, Extent and Commencement:**

(1) ಈ ಅಧಿನಿಯಮವನ್ನು ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ಅನ್ವಯಿಸುತ್ತದೆ.

(3) ಇದು 1975ರ ಅಕ್ಟೋಬರ್ 25ನೇ ದಿನಾಂಕದಂದು ಜಾರಿಗೆ ಬಂದಿದೆ ಎಂಬುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು**
**Definitions:**

ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(ಎ) **"ಸಾಲ ನೀಡಿಕೆ" "Advance"** ಎಂದರೆ (ಇದರಲ್ಲಿ ಇನ್ನು ಮುಂದೆ ಸಾಲದಾತ ಎಂದು ಕರೆಯಲಾಗುವ) ಒಬ್ಬ ವ್ಯಕ್ತಿಯು (ಇದರಲ್ಲಿ ಇನ್ನು ಮುಂದೆ



ಸಾಲಗಾರನೆಂದು ಕರೆಯಲಾಗುವ) ಇನ್ನೊಬ್ಬ ವ್ಯಕ್ತಿಗೆ ನಗದಿನ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಅಥವಾ ಭಾಗಶಃ ನಗದು ರೂಪದಲ್ಲಿ ಅಥವಾ ಭಾಗಶಃ ವಸ್ತು ರೂಪದಲ್ಲಿ ಕೊಡಮಾಡಿದ ಸಾಲ ನೀಡಿಕೆ;

(ಬಿ) **"ಒಪ್ಪಂದ" "Agreement"** ಎಂದರೆ, ಸಾಲಗಾರ ಮತ್ತು ಸಾಲದಾತನ ನಡುವಿನ (ಲಿಖಿತ ಅಥವಾ ಬಾಯಿಮಾತಿನ ಅಥವಾ ಭಾಗಶಃ ಬರಹದಲ್ಲಿರುವ ಮತ್ತು ಭಾಗಶಃ ಬಾಯಿಮಾತಿನ) ಒಪ್ಪಂದವೆಂದು ಅರ್ಥ ಮತ್ತು ಇದು ಸಂಬಂಧಪಟ್ಟ ಸ್ಥಳೀಯ ಪ್ರದೇಶದಲ್ಲಿ ಪ್ರಚಲಿತ ಸಾಮಾಜಿಕ ಪದ್ಧತಿಯ ಪ್ರಕಾರ ಅಸ್ತಿತ್ವದಲ್ಲಿ ಇದೆ ಎಂದು ಪೂರ್ವಭಾವನೆ ಮಾಡಲಾದ ಬಲವಂತದ ದುಡಿಮೆಗೆ ಅವಕಾಶ ಕಲ್ಪಿಸುವಂತಹ ಒಪ್ಪಂದವನ್ನು ಒಳಗೊಳ್ಳುತ್ತದೆ.

**ವಿವರಣೆ Explanation:** ಈ ಮುಂದೆ ತಿಳಿಸಿರುವ ಬಲವಂತದ ದುಡಿಮೆಗಳ ಸಂಬಂಧದಲ್ಲಿ ಸಾಮಾಜಿಕ ಸಂಪ್ರದಾಯಗಳ ಅಡಿಯಲ್ಲಿ ಸಾಲಗಾರ ಮತ್ತು ಸಾಲದಾತನ ನಡುವೆ ಒಂದು ಒಪ್ಪಂದ ಅಸ್ತಿತ್ವದಲ್ಲಿದೆ ಎಂದು ಸಾಮಾನ್ಯವಾಗಿ ಪೂರ್ವಭಾವನೆ ಮಾಡಲಾಗುತ್ತದೆ, ಎಂದರೆ :–

ಆಡಿಯಾಮಾರ್, ಬಾರಾವಾಸಿಯ, ಬಸಹಯಾ, ಬೇಥೂ, ಭಗೇಲಾ, ಚೇರೂಮಾರ್, ಗಾರುಗಲ್ಲು, ಹಾಲಿ, ಹರಿ, ಹಾರವಯಿ, ಹೊಲ್ಯ, ಜಾನಾ, ಜೀತ, ಕಾಮಿಯಾ, ಖಿಂದಿತ್–ಮುಂಡಿತ್, ಕುತಿಯಾ, ಲೇಖೇರಿ, ಮುಂಝ್ಯೊ, ಮೇಟ್, ಮುನೀಷ್ ಪಥಿತ್, ನಿತ್ ಮಜೂರ್, ಪಲೇರು, ಪಡಿಯಾಲ್, ಪನ್ನಾಯಿಲಾಲ್, ಸಾಗಡಿ, ಸಂಜಿ, ಸಂಜಾವತ್, ಸೇವಕ್, ಸೇವಕಿಯಾ, ಸೆರಿ, ವೆಟ್ಟಿ;

(ಸಿ) ಮಾತೃ ಪ್ರಧಾನ ಸಮಾಜಕ್ಕೆ ಸೇರಿದ ಒಬ್ಬ ವ್ಯಕ್ತಿಯ ಸಂಬಂಧದಲ್ಲಿ **"ಪೂರ್ವಜ" ಅಥವಾ "ವಂಶಜ" "Ascendant or Descendant"** ಎಂದರೆ ಅಂಥ ಸಮಾಜದಲ್ಲಿ ಜಾರಿಯಲ್ಲಿರುವ ಉತ್ತರಾಧಿಕಾರ ಕಾನೂನಿಗೆ ಅನುಸಾರವಾಗಿ ಅಂಥ ಪದಗಳು ಯಾರಿಗೆ ಅನ್ವಯಿಸುತ್ತದೋ ಆ ವ್ಯಕ್ತಿ;

(ಡಿ) **"ಜೀತದ ಋಣ" "Bonded Deft** ಎಂದರೆ, ಒಬ್ಬ ಜೀತ ಕಾರ್ಮಿಕನು, ಜೀತ ಕಾರ್ಮಿಕ ಪದ್ಧತಿಯ ಪ್ರಕಾರ ಅಥವಾ ಅದಕ್ಕನುಸಾರವಾಗಿ ಪಡೆದುಕೊಂಡ ಅಥವಾ ಪಡೆದಿರುವನೆಂದು ಪೂರ್ವಭಾವನೆ ಮಾಡಲಾದ ಸಾಲ;

(ಇ) **"ಜೀತ ದುಡಿಮೆ" "Bonded Labour"** ಎಂದರೆ ಜೀತ ಕಾರ್ಮಿಕ ಪದ್ಧತಿಯ ಅಡಿಯಲ್ಲಿ ಸಲ್ಲಿಸಿದ ಯಾವುದೇ ದುಡಿಮೆ ಅಥವಾ ಸೇವೆ;

(ಎಫ್) **"ಜೀತ ಕಾರ್ಮಿಕ" "Bonded Labourer"** ಎಂದರೆ ಜೀತ ಋಣವನ್ನು ಮಾಡಿರುವ ಮಾಡುವ ಅಥವಾ ಮಾಡಿರುವನೆಂದು ಪೂರ್ವಭಾವನೆ ಮಾಡಲಾದ ಒಬ್ಬ ಕಾರ್ಮಿಕ;

(ಜಿ) **"ಜೀತ ಕಾರ್ಮಿಕ ಪದ್ಧತಿ" "Bonded Labour System"** ಎಂದರೆ ಯಾವ ಪದ್ಧತಿಯ ಪ್ರಕಾರ ಒಬ್ಬ ಸಾಲಗಾರನು, ಈ ಮುಂದಿನ ವಿಷಯಗಳಿಗಾಗಿ ಸಾಲದಾತನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುತ್ತಾನೋ, ಮಾಡಿಕೊಂಡಿರುವನೋ ಅಥವಾ ಮಾಡಿಕೊಂಡಿರುವನೆಂದು ಪೂರ್ವಭಾವನೆ ಮಾಡಲಾಗಿದೆಯೋ ಆ ಬಲವಂತದ ದುಡಿಮೆ ಅಥವಾ ಭಾಗಶಃ ಬಲವಂತದ ದುಡಿಮೆ ಪದ್ಧತಿ,-

(i) ತಾನು ಅಥವಾ ತನ್ನ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ತೆಗೆದುಕೊಂಡಿದ್ದ ಸಾಲದ (ಅಂಥ ಸಾಲವನ್ನು ಕುರಿತು ಯಾವುದೇ ದಸ್ತಾವೇಜಿನ ಸಾಕ್ಷ್ಯ ಇರಲಿ ಅಥವಾ ಇಲ್ಲದಿರಲಿ) ಪ್ರತಿಫಲವಾಗಿ ಮತ್ತು ಅಂಥ ಸಾಲದ ಮೇಲೆ ಯಾವುದಾದರೂ ಬಡ್ಡಿಯು ಬಾಕಿ ಇದ್ದರೆ ಅದಕ್ಕೆ ಪ್ರತಿಫಲವಾಗಿ ದುಡಿಯಲು; ಅಥವಾ

(ii) ಯಾವುದೋ ರೂಢಿಗತ ಅಥವಾ ಸಾಮಾಜಿಕ ಬಾಧ್ಯತೆಗೆ ಅನುಸಾರವಾಗಿ; ಅಥವಾ

(iii) ಉತ್ತರಾಧಿಕಾರದ ಮೂಲಕ ತನಗೆ ಪ್ರಾಪ್ತವಾದ ಬಾಧ್ಯತೆಗೆ ಅನುಸಾರವಾಗಿ; ಅಥವಾ

(iv) ತಾನು ಅಥವಾ ತನ್ನ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ಪಡೆದಿದ್ದ ಯಾವುದೇ ಹಣಕಾಸಿನ ಪ್ರತಿಫಲಕ್ಕಾಗಿ; ಅಥವಾ

(v) ತಾನು ಯಾವುದೇ ನಿರ್ದಿಷ್ಟ ಜಾತಿ ಅಥವಾ ಬುಡಕಟ್ಟಿನಲ್ಲಿ ಹುಟ್ಟಿದ ಕಾರಣದಿಂದಾಗಿ, ಅವನು,-

(1) ತಾನಾಗಿಯೇ ಅಥವಾ ತನ್ನ ಕುಟುಂಬದ ಯಾವನೇ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯ ಮೂಲಕ ಸಾಲದಾತನಿಗೆ ಅಥವಾ ಸಾಲದಾತನ ಪ್ರಯೋಜನಕ್ಕಾಗಿ ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಯಾವುದೇ ಮಜೂರಿಯನ್ನು ಪಡೆಯದೇ ಅಥವಾ ನಾಮ ಮಾತ್ರದ ಮಜೂರಿ ಪಡೆಯಲು ದುಡಿಮೆ ಅಥವಾ ಸೇವೆಯನ್ನು ಸಲ್ಲಿಸಬೇಕಾಗುವುದು, ಅಥವಾ

(2) ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಉದ್ಯೋಗ ಸ್ವಾತಂತ್ರ್ಯವನ್ನು ಅಥವಾ ಜೀವನೋಪಾಯದ ಇತರ ಮಾರ್ಗವನ್ನು ಕಳೆದುಕೊಳ್ಳುವುದು, ಅಥವಾ

(3) ಭಾರತ ರಾಜ್ಯ ಕ್ಷೇತ್ರದಾದ್ಯಂತ ಸ್ವತಂತ್ರವಾಗಿ ಸಂಚರಿಸಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು, ಅಥವಾ

(4) ತನ್ನ ಯಾವುದೇ ಆಸ್ತಿಯನ್ನು ಅಥವಾ ತನ್ನ ದುಡಿಮೆಯ ಅಥವಾ ತನ್ನ ಕುಟುಂಬದ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯಿಂದ



ಗಳಿಸಿದ ಯಾವುದೇ ಉತ್ಪನ್ನವನ್ನು ವಿನಿಯೋಗಿಸಿಕೊಳ್ಳಲು ಅಥವಾ ಮಾರುಕಟ್ಟೆ ಮೌಲ್ಯದಲ್ಲಿ ಮಾರಾಟ ಮಾಡಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು, ಮತ್ತು ಯಾವುದರ ಪ್ರಕಾರ ಸಾಲಗಾರನಿಗೆ ಜಾಮೀನು ನೀಡುವಂತಹ ಒಬ್ಬ ವ್ಯಕ್ತಿಯು ಸಾಲಗಾರನು ತನ್ನ ಋಣವನ್ನು ತೀರಿಸಲು ತಪ್ಪಿದಂತಹ ಸಂದರ್ಭದಲ್ಲಿ ಸಾಲಗಾರನಿಗೆ ಬದಲಾಗಿ ತಾನು ಜೀತ ದುಡಿಮೆಯನ್ನು ಮಾಡುವುದಾಗಿ ಸಾಲದಾತನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವಂತಹ ಅಥವಾ ಮಾಡಿಕೊಂಡಿರುವಂತಹ ಅಥವಾ ಮಾಡಿಕೊಂಡಿರುತ್ತಾನೆ ಎಂದು ಪೂರ್ವಭಾವನೆ ಮಾಡಲಾಗುವಂತಹ ಒಂದು ಬಲವಂತದ ಅಥವಾ ಭಾಗಶಃ ಬಲವಂತದ ದುಡಿಮೆಯ ಪದ್ಧತಿಯನ್ನು ಇದು ಒಳಗೊಳ್ಳುತ್ತದೆ.

[1][ವಿವರಣೆ **Explanation:** ಸಂದೇಹಗಳ ನಿವಾರಣೆಗಾಗಿ, ಕರಾರು ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನ) ಅಧಿನಿಯಮ, 1970 (1970ರ 37)ರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಲಾದಂತೆ ಕರಾರು ಕಾರ್ಮಿಕನಾಗಿರುವ ಯಾವನೇ ಕೆಲಸಗಾರನು, ಅಥವಾ ಅಂತರ ರಾಜ್ಯ ಮನೆ ಕೆಲಸಗಾರರ (ನೇಮಕಾತಿ ಮತ್ತು ಸೇವಾ ಷರತ್ತುಗಳ ನಿಯಂತ್ರಣ) ಅಧಿನಿಯಮ, 1979 (1979ರ 30) ಇದರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಇ) ಖಂಡದಲ್ಲಿ ಪರಿಭಾಷಿಸಲಾದ ಒಬ್ಬ ಅಂತರ ರಾಜ್ಯ ವಲಸೆ ಕೆಲಸಗಾರನು ಈ ಖಂಡದ (1)ನೇ ಉಪಖಂಡದಲ್ಲಿ ಹೇಳಲಾದಂತಹ ಸ್ವರೂಪದ ಸನ್ನಿವೇಶಗಳಲ್ಲಿ ದುಡಿಮೆ ಅಥವಾ ಸೇವೆಯನ್ನು ಸಲ್ಲಿಸಲು ಅಗತ್ಯಪಡಿಸುವಂತಹ ಅಥವಾ (2) ರಿಂದ (4)ರ ವರೆಗಿನ ಉಪಖಂಡಗಳಲ್ಲಿ ಹೇಳಲಾದ ಎಲ್ಲಾ ಅಥವಾ ಯಾವುದೇ ಅಸಮರ್ಥತೆಗಳಿಗೆ ಒಳಪಡಿಸಿದಂತಹ ಯಾವುದೇ ಬಲವಂತದ ದುಡಿಮೆಯು ಅಥವಾ ಭಾಗಶಃ ಬಲವಂತದ ದುಡಿಮೆಯ ಯಾವುದೇ ಪದ್ಧತಿಯನ್ನು ಈ ಖಂಡದ ಅರ್ಥ ವ್ಯಾಪ್ತಿಯಲ್ಲಿ "ಜೀತ ಕಾರ್ಮಿಕ ಪದ್ಧತಿ" ಎಂದು ಈ ಮೂಲಕ ಘೋಷಿಸಲಾಗಿದೆ].

(ಎಚ್) ಒಬ್ಬ ವ್ಯಕ್ತಿಯ ಸಂಬಂಧದಲ್ಲಿ **"ಕುಟುಂಬ" "Family"** ಎಂದರೆ ಅಂತಹ ವ್ಯಕ್ತಿಯ ಪೂರ್ವಜ ಅಥವಾ ವಂಶಜ ಒಳಗೊಳ್ಳುತ್ತಾರೆ;

(ಐ) ಯಾವುದೇ ದುಡಿಮೆಗೆ ಸಂಬಂಧಪಟ್ಟಂತೆ **"ನಾಮಮಾತ್ರ ಮಜೂರಿ" "Nominal Wages"** ಎಂದರೆ,-

(ಎ) ಅದೇ ಅಥವಾ ಅಂಥದ್ದೇ ದುಡಿಮೆಯ ಸಂಬಂಧದಲ್ಲಿ ಸರ್ಕಾರವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನಿಗದಿಪಡಿಸಿದ ಕನಿಷ್ಠ ಮಜೂರಿಗಿಂತ ಕಡಿಮೆ ಇರುವ ಮಜೂರಿ, ಮತ್ತು

(ಬಿ) ಅಂತಹ ಯಾವುದೇ ತರಹದ ದುಡಿಮೆಯ ಸಂಬಂಧದಲ್ಲಿ ಹಾಗೆ ಕನಿಷ್ಠ

1. 1985ರ ಅಧಿನಿಯಮ ಸಂಖ್ಯೆ 73ರ ಕಲಂ 2ರ ಮೇರೆಗೆ ಸೇರಿಸಲಾಗಿದೆ.

ಮಜೂರಿಯನ್ನು ನಿಗದಿಪಡಿಸಿದಲ್ಲಿ ಇರುವ ಅದೇ ಸ್ಥಳೀಯ ಪ್ರದೇಶದಲ್ಲಿ ಕಾರ್ಮಿಕರಿಗೆ ಅದೇ ಕೆಲಸ ಅಥವಾ ಅಂಥದ್ದೇ ದುಡಿಮೆಗೆ ಸಾಮಾನ್ಯವಾಗಿ ಸಂದಾಯ ಮಾಡಲಾಗುವ ಮಜೂರಿ;

(ಜೆ) "ನಿಯಮಿಸಲಾದುದು" "Prescribed" ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು.

3. **ಈ ಅಧಿನಿಯಮವು ಮೇಲುಗೈ ಪರಿಣಾಮವನ್ನು ಹೊಂದಿರತಕ್ಕದ್ದು**
**Act to have over-riding effect:**

ಈ ಅಧಿನಿಯಮದ ಉಪಬಂಧಗಳು ಈ ಅಧಿನಿಯಮವಲ್ಲದ ಯಾವುದೇ ಇತರ ಅಧಿನಿಯಮದ ಅಥವಾ ಈ ಅಧಿನಿಯಮವಲ್ಲದ ಯಾವುದೇ ಇತರ ಅಧಿನಿಯಮದ ಕಾರಣದಿಂದಾಗಿ ಪರಿಣಾಮಕಾರಿಯಾಗಿ ಜಾರಿಗೆ ಬಂದಿರುವ ಯಾವುದೇ ಲಿಖಿತ ಕಾಗದ ಪತ್ರದಲ್ಲಿ ಅವುಗಳಿಗೆ ಸರಿಹೊಂದದ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

* * *

### ಅಧ್ಯಾಯ-II - Chapter-II

## ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ
## Abolition of Bonded Labour System

4. **ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ**
**Abolition of Bonded Labour System:**

(1) ಈ ಅಧಿನಿಯಮವು ಪ್ರಾರಂಭವಾದ ಲಾಗಾಯತು ಜೀತ ಕಾರ್ಮಿಕ ಪದ್ಧತಿಯು ನಿರ್ಮೂಲವಾಗತಕ್ಕದ್ದು. ಮತ್ತು ಪ್ರತಿಯೊಬ್ಬ ಜೀತ ಕಾರ್ಮಿಕನೂ ಹಾಗೆ ಪ್ರಾರಂಭವಾದಂದಿನಿಂದ ಜೀತ ಮುಕ್ತನಾಗತಕ್ಕದ್ದು ಮತ್ತು ಯಾವುದೇ ಜೀತ ದುಡಿಮೆ ಮಾಡಲು ಯಾವುದೇ ಬಾಧ್ಯತೆಯಿಂದ ವಿಮೋಚನೆಯನ್ನು ಹೊಂದತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಯಾವ ವ್ಯಕ್ತಿಯೂ,–

(ಎ) ಜೀತ ಕಾರ್ಮಿಕ ಪದ್ಧತಿಯ ಅನುಸಾರವಾಗಿ ಅಥವಾ ಅದರ ಅಡಿಯಲ್ಲಿ ಯಾರಿಗೂ ಯಾವುದೇ ಸಾಲವನ್ನು ನೀಡತಕ್ಕದ್ದಲ್ಲ; ಅಥವಾ

(ಬಿ) ಯಾವುದೇ ಜೀತ ದುಡಿಮೆಯನ್ನು ಅಥವಾ ಇತರ ಪ್ರಕಾರದ ಬಲವಂತದ ದುಡಿಮೆಯನ್ನು ಮಾಡಬೇಕೆಂದು ಯಾವ ವ್ಯಕ್ತಿಯನ್ನು ಒತ್ತಾಯಿಸತಕ್ಕದ್ದಲ್ಲ.



5. **ಒಪ್ಪಂದ, ರೂಢಿಗಳು ಮುಂತಾದವು ಅಸಿಂಧುವಾಗುತ್ತವೆ**
**Agreement, Custom, etc. to be void:**

ಈ ಅಧಿನಿಯಮವು ಪ್ರಾರಂಭವಾದ ಲಾಗಾಯತು (ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಅಥವಾ ಅದರ ಪ್ರಾರಂಭದ ಅನಂತರ ಮಾಡಿಕೊಂಡ ಅಥವಾ ನಿರ್ವಹಿಸಿಕೊಂಡು ಬರಲಾದ) ಯಾವುದೇ ಕಾರಣದಿಂದ ಯಾವನೇ ವ್ಯಕ್ತಿಯು ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಯು ಅಥವಾ ಅವನ ಅವಲಂಬಿತನು ಜೀತ ಕಾರ್ಮಿಕನಂತೆ ಯಾವುದೇ ಕೆಲಸವನ್ನು ಮಾಡಲು ಅಥವಾ ಯಾವುದೇ ಸೇವೆಯನ್ನು ಸಲ್ಲಿಸಲು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ರೂಢಿ ಅಥವಾ ಸಂಪ್ರದಾಯ ಅಥವಾ ಯಾವುದೇ ಕರಾರು, ಒಪ್ಪಂದ ಅಥವಾ ಇತರ ಲಿಖಿತ ಕಾಗದ ಪತ್ರವು ಶೂನ್ಯವಾಗತಕ್ಕದ್ದು ಮತ್ತು ಜಾರಿಗೆ ಬರತಕ್ಕದ್ದಲ್ಲ.

* * *

### ಅಧ್ಯಾಯ-III - Chapter-III

## ಜೀತದ ಋಣವನ್ನು ಮರುಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು
## Liability to Repay Bonded Debt to stand extinguished

6. **ಜೀತದ ಋಣವನ್ನು ಮರು ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು.**
**Liability to Repay Bonded Debt to stand extinguished:**

(1) ಈ ಅಧಿನಿಯಮದ ಪ್ರಾರಂಭದಂದು ಯಾವುದೇ ಜೀತ ಋಣವನ್ನು ಅಥವಾ ಅಂಥ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಅಂಥ ಜೀತ ಋಣವನ್ನು ತೀರಿಸದೇ ಉಳಿದಿರುವ ಭಾಗವನ್ನು ವಾಪಸು ಸಂದಾಯ ಮಾಡಲು ಜೀತ ಕಾರ್ಮಿಕನಿಗೆ ಇರುವ ಪ್ರತಿಯೊಂದು ಬಾಧ್ಯತೆಯೂ ಅಳಿದುಹೋಗಿದೆಯೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ಅನಂತರ ಯಾವುದೇ ಜೀತ ಋಣ ಅಥವಾ ಅದರ ಯಾವುದೇ ಭಾಗದ ವಸೂಲಿಗಾಗಿ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರದ ಮುಂದೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(3) ಜೀತ ಋಣದ ವಸೂಲಿಗಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮಾಡಿದ ಮತ್ತು ಅಂತಹ ಪ್ರಾರಂಭಕ್ಕೆ ಮೊದಲು ಪೂರ್ಣವಾಗಿ ತೀರಿಸದೇ ಇರುವ

ಪ್ರತಿಯೊಂದು ಡಿಕ್ರಿ ಅಥವಾ ಆದೇಶವನ್ನು ಹಾಗೆ ಪ್ರಾರಂಭವಾದ ತರುವಾಯ ಪೂರ್ಣವಾಗಿ ತೀರಿಸಲಾಗಿದೆ ಎಂದು ಭಾವಿಸತಕ್ಕದ್ದು.

(4) ಯಾವುದೇ ಜೀತ ಋಣದ ವಸೂಲಿಗಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಪ್ರತಿಯೊಂದು ಜಪ್ತಿಯು, ಈ ಅಧಿನಿಯಮವು ಪ್ರಾರಂಭವಾದ ಕೂಡಲೇ ತೆರವಾಗತಕ್ಕದ್ದು ಮತ್ತು ಅಂಥ ಜಪ್ತಿಯ ಅನುಸರಣೆಯಲ್ಲಿ ಜೀತ ಕಾರ್ಮಿಕನ ಯಾವುದೇ ಚರ ಸ್ವತ್ತನ್ನು ಅಧಿವಶಕ್ಕೆ ತೆಗೆದುಕೊಂಡಿರುವಲ್ಲಿ ಮತ್ತು ತಮ್ಮ ಅಭಿರಕ್ಷೆಗೆ ತೆಗೆದುಕೊಂಡಿರುವಲ್ಲಿ ಮತ್ತು ಅದನ್ನು ಮಾರಾಟ ಮಾಡುವುದಕ್ಕೆ ಮುನ್ನ ಅದನ್ನು ಯಾವುದೇ ನ್ಯಾಯಾಲಯದ ಅಥವಾ ಪ್ರಾಧಿಕಾರದ ಅಭಿರಕ್ಷೆಯಲ್ಲಿ ಇಟ್ಟಿರುವಲ್ಲಿ ಅಂಥ ಚರಸ್ವತ್ತಿನ ಸ್ವಾಧೀನವನ್ನು ಈ ಅಧಿನಿಯಮದ ಪ್ರಾರಂಭದ ತರುವಾಯ ಸಾದ್ಯವಾದಷ್ಟು ಬೇಗನೆ ಜೀತ ಕಾರ್ಮಿಕನಿಗೆ ವಾಪಸು ಮಾಡತಕ್ಕದ್ದು.

(5) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಜೀತ ಕಾರ್ಮಿಕನಿಗೆ ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಗೆ ಅಥವಾ ಅವನ ಇತರ ಅವಲಂಬಿತನಿಗೆ ಸೇರಿದ ಯಾವುದೇ ಸ್ವತ್ತಿನ ಸ್ವಾಧೀನವನ್ನು ಯಾವುದೇ ಜೀತ ಋಣದ ವಸೂಲಿಗಾಗಿ ಯಾವನೇ ಸಾಲದಾತನು ಬಲವಂತದಿಂದ ತನ್ನ ವಶಕ್ಕೆ ತೆಗೆದುಕೊಂಡಿರುವಲ್ಲಿ, ಅಂತಹ ಸ್ವತ್ತನ್ನು ಈ ಅಧಿನಿಯಮವು ಪ್ರಾರಂಭವಾದ ಅನಂತರ ಸಾಧ್ಯವಾದಷ್ಟು ಬೇಗನೆ ಯಾರಿಂದ ಅದನ್ನು ಅಧಿವಶಕ್ಕೆ ತೆಗೆದುಕೊಳ್ಳಲಾಗಿತ್ತೋ ಆ ವ್ಯಕ್ತಿಗೆ ವಾಪಸು ಮಾಡಿ ಅವನ ಸ್ವಾಧೀನಕ್ಕೆ ಒಪ್ಪಿಸತಕ್ಕದ್ದು.

(6) (4)ನೇ ಅಥವಾ (5)ನೇ ಉಪಪ್ರಕರಣದಲ್ಲಿ ನಿರ್ದೇಶಿತವಾದ ಯಾವುದೇ ಸ್ವತ್ತಿನ ಸ್ವಾಧೀನವನ್ನು ಈ ಅಧಿನಿಯಮವು ಪ್ರಾರಂಭವಾದ ಮೂವತ್ತು ದಿನಗಳ ಒಳಗೆ ವಾಪಸು ಮಾಡದಿದ್ದರೆ, ಬಾಧಿತನಾದ ವ್ಯಕ್ತಿಯು ನಿಯಮಿಸಬಹುದಾದಂತಹ ಕಾಲದೊಳಗೆ ಅಂತಹ ಸ್ವತ್ತಿನ ಸ್ವಾಧೀನದ ವಾಪಸಾತಿಗಾಗಿ ನಿಯಮಿಸಲಾದ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಆ ನಿಯಮಿಸಲಾದ ಪ್ರಾಧಿಕಾರವು ಸಾಲದಾತನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಅನಂತರ, ಸಂಬಂಧಪಟ್ಟ ಸ್ವತ್ತನ್ನು ಆದೇಶದಲ್ಲಿ ನಿರ್ದಿಷ್ಟವಾಗಿ ಹೇಳಲಾದ ಕಾಲದೊಳಗೆ ಅರ್ಜಿದಾರನಿಗೆ ವಾಪಸು ಮಾಡಬೇಕೆಂದು ಸಾಲದಾತನಿಗೆ ನಿರ್ದೇಶನ ನೀಡಬಹುದು.

(7) ನಿಯಮಿಸಲಾದ ಯಾವುದೇ ಪ್ರಾಧಿಕಾರವು (6)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶವನ್ನು ಒಂದು ಸಿವಿಲ್ ನ್ಯಾಯಾಲಯವು ಮಾಡಿದ ಆದೇಶವೆಂಬುದಾಗಿ ಭಾವಿಸತಕ್ಕದ್ದು ಮತ್ತು ಸಾಲದಾತನಿಗೆ ಸ್ವಯಿಚ್ಛೆಯಿಂದ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುವ ಅಥವಾ ಲಾಭಕ್ಕಾಗಿ ಖುದ್ದಾಗಿ ಕೆಲಸ ಮಾಡುವ ಸ್ಥಳೀಯ ಪರಿಮಿತಿಗಳ ಮೇಲೆ ಅತ್ಯಂತ ಕಡಿಮೆ ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಯನ್ನುಳ್ಳ ನ್ಯಾಯಾಲಯವು ಅದನ್ನು ಜಾರಿಗೆ ತರಬಹುದು.



(8) ಜೀತ ಋಣದ ವಸೂಲಿಗಾಗಿ ಡಿಕ್ರಿ ಅಥವಾ ಆದೇಶವನ್ನು ಜಾರಿಗೊಳಿಸುವಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ಜಪ್ತಿಯಾದ ಸ್ವತ್ತನ್ನು ಮಾರಾಟ ಮಾಡಿದ್ದಲ್ಲಿ ಅಂಥ ಮಾರಾಟವು ಈ ಅಧಿನಿಯಮದ ಯಾವುದೇ ಉಪಬಂಧದಿಂದ ಬಾಧಿತವಾಗತಕ್ಕದ್ದಲ್ಲವೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

ಆದರೆ, ಜೀತ ಕಾರ್ಮಿಕನು ಅಥವಾ ಈ ಬಗ್ಗೆ ಅವನು ಪ್ರಾಧಿಕಾರ ನೀಡಿದ ಒಬ್ಬ ವಾರಂಟನು ಈ ಅಧಿನಿಯಮವು ಪ್ರಾರಂಭವಾದ ಐದು ವರ್ಷಗಳ ಒಳಗೆ ಯಾವುದೇ ಕಾಲದಲ್ಲಿ ಮಾರಾಟದ ಜಾಹಿರಾತಿನಲ್ಲಿ ನಿರ್ದಿಷ್ಟವಾಗಿ ಹೇಳಲಾದ ಯಾವ ಮೊಬಲಗಿನ ವಸೂಲಿಗಾಗಿ ಮಾರಾಟವನ್ನು ಮಾಡಲು ಆದೇಶಿಸಲಾಗಿತ್ತೋ ಆ ಮೊಬಲಗನ್ನು ಡಿಕ್ರಿದಾರನು ಈ ಜಾಹೀರಾತಿನ ಹಾಗೂ ಮಧ್ಯಕಾಲೀನ ಲಾಭವನ್ನು ಅದರಿಂದ ವಜಾ ಮಾಡಿ ಉಳಿದುದನ್ನು ಡಿಕ್ರಿದಾರನಿಗೆ ಸಂದಾಯ ಮಾಡಲು ನ್ಯಾಯಾಲಯದಲ್ಲಿ ಜಮೆ ಮಾಡಿ, ಮಾರಾಟವನ್ನು ತಳ್ಳಿ ಹಾಕಲು ಅರ್ಜಿಯನ್ನು ಸಲ್ಲಿಸಬಹುದು.

(9) ಜೀತ ಕಾರ್ಮಿಕನಿಗೆ ಕೊಟ್ಟ ಯಾವುದೇ ಸಾಲದ ವಸೂಲಿಯ ಬಗ್ಗೆ ಹೂಡಲಾದ ದಾವೆ ಅಥವಾ ವ್ಯವಹರಣೆಯನ್ನು ಒಳಗೊಂಡು ಜೀತ ಕಾರ್ಮಿಕ ಪದ್ಧತಿಯ ಪ್ರಕಾರ ಯಾವುದೇ ಹೊಣೆಗಾರಿಕೆಯನ್ನು ಜಾರಿಗೊಳಿಸಬೇಕೆಂದು ಒತ್ತಾಯಪಡಿಸಲು ಹೂಡಿದ ಯಾವುದೇ ದಾವೆ ಅಥವಾ ವ್ಯವಹರಣೆಯು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಇತ್ಯರ್ಥವಾಗದೇ ಉಳಿದಾದಲ್ಲಿ ಅಂತಹ ದಾವೆ ಅಥವಾ ಇತರ ವ್ಯವಹರಣೆಯು ಈ ಅಧಿನಿಯಮವು ಪ್ರಾರಂಭವಾದ ಕೂಡಲೇ ವಜಾ ಆಗತಕ್ಕದ್ದು.

(10) ಈ ಅಧಿನಿಯಮವು ಪ್ರಾರಂಭವಾಗುವ ದಿನದಂದು ತೀರ್ಪಿಗಿಂತ ಮೊದಲು ಅಥವಾ ತೀರ್ಪಿನ ಅನಂತರ ಸಿವಿಲ್ ಕಾರಾಗೃಹದಲ್ಲಿ ಬಂಧಿಸಿಟ್ಟಿರುವಂತಹ ಪ್ರತಿಯೊಬ್ಬ ಜೀತ ಕಾರ್ಮಿಕನನ್ನು ಕೂಡಲೇ ಬಂಧನದಿಂದ ಬಿಡುಗಡೆ ಮಾಡತಕ್ಕದ್ದು.

**7. ಜೀತ ಕಾರ್ಮಿಕನ ಸ್ವತ್ತನ್ನು ಅಡಮಾನ ಇತ್ಯಾದಿಗಳಿಂದ ಮುಕ್ತಗೊಳಿಸತಕ್ಕದ್ದು**
**Property of Bonded Labourer to be freed from mortgage, etc.:**

(1) ಈ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಯಾವುದೇ ಜೀತ ಋಣದ ಸಂಬಂಧದಲ್ಲಿ ಯಾವುದೇ ಅಡಮಾನ, ಋಣಭಾರ, ಧಾರಣಾಧಿಕಾರ ಅಥವಾ ಇತರ ಪೂರ್ವಾಧಿಗಳಿಗೆ ಒಳಪಟ್ಟಿದ್ದು, ಜೀತ ಕಾರ್ಮಿಕನಿಗೆ ಸೇರಿರುವ ಎಲ್ಲ ಆಸ್ತಿಯು ಅದು ಜೀತ ಋಣಕ್ಕೆ ಸಂಬಂಧಪಟ್ಟಿರುವಷ್ಟರ ಮಟ್ಟಿಗೆ, ಅಂತಹ ಅಡಮಾನ, ಋಣಭಾರ, ಧಾರಣಾಧಿಕಾರ ಅಥವಾ ಇತರ ಪೂರ್ವಾಧಿಗಳಿಂದ ಮುಕ್ತವಾಗಿರತಕ್ಕದ್ದು ಮತ್ತು ವಿಮೋಚಿತವಾಗಿರತಕ್ಕದ್ದು ಮತ್ತು ಅಂತಹ ಯಾವುದೇ ಸ್ವತ್ತು ಈ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಅಡಮಾನದಾರನ ಅಥವಾ ಋಣಭಾರ, ಧಾರಣಾಧಿಕಾರ ಅಥವಾ ಪೂರ್ವಾಧಿಯನ್ನು ಹೊಂದಿರುವವನ ಸ್ವಾಧೀನದಲ್ಲಿರುವಲ್ಲಿ

ಅಂತಹ ಸ್ವತ್ತಿನ ಸ್ವಾಧೀನವನ್ನು (ಅದು ಯಾವುದೇ ಇತರ ಋಣಭಾರಕ್ಕೆ ಒಳಪಟ್ಟಿದ್ದ ಹೊರತು) ಈ ಅಧಿನಿಯಮವು ಪ್ರಾರಂಭವಾದ ಕೂಡಲೇ ಜೀತ ಕಾರ್ಮಿಕನಿಗೆ ವಾಪಸು ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ನಿರ್ದೇಶಿಸಿದ ಯಾವುದೇ ಸ್ವತ್ತಿನ ಸ್ವಾಧೀನವನ್ನು ಜೀತ ಕಾರ್ಮಿಕನಿಗೆ ವಾಪಸು ಕೊಡುವಲ್ಲಿ ಏನಾದರೂ ವಿಳಂಬವಾಗಿದ್ದರೆ, ಅಂತಹ ಜೀತ ಕಾರ್ಮಿಕನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಆ ದಿನಾಂಕದಿಂದ ಅಡಮಾನದಾರನಿಂದ ಅಥವಾ ಧಾರಣಾಧಿಕಾರ, ಋಣಭಾರ ಅಥವಾ ಪೂರ್ವಾಧಿಯನ್ನು ಹೊಂದಿರುವವನಿಂದ ಅಂಥ ಸ್ವತ್ತು ಇರುವ ಸ್ಥಳೀಯ ಪರಿಮಿತಿಗಳ ಮೇಲೆ ಅತ್ಯಂತ ಕಡಿಮೆ ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಯನ್ನುಳ್ಳ ಸಿವಿಲ್ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂತಹ ಮಧ್ಯಕಾಲೀನ ಲಾಭಗಳನ್ನು ವಸೂಲು ಮಾಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**8. ಜೀತ ಮುಕ್ತನಾದ ಜೀತ ಕಾರ್ಮಿಕನನ್ನು ಹೊಲಮನೆ, ಮುಂತಾದವುಗಳಿಂದ ಹೊರದೂಡತಕ್ಕದ್ದಲ್ಲ**
**Freed Bonded Labourer not to be evicted from Homestead, etc.:**

(1) ಈ ಅಧಿನಿಯಮದ ಕಾರಣದಿಂದ ಯಾವುದೇ ಜೀತ ದುಡಿಮೆಯನ್ನು ಮಾಡಬೇಕಾದ ಹೊಣೆಗಾರಿಕೆಯಿಂದ ಮುಕ್ತನಾದ ಮತ್ತು ವಿಮೋಚನೆಯನ್ನು ಪಡೆದ ಯಾವನೇ ವ್ಯಕ್ತಿಯನ್ನೂ ಜೀತ ದುಡಿಮೆಯ ಪ್ರತಿಫಲದ ಭಾಗವಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಅವನ ಅಧಿಭೋಗದಲ್ಲಿದ್ದ ಯಾವುದೇ ಹೊಲಮನೆ ಅಥವಾ ಇತರ ನಿವಾಸದ ಆವರಣಗಳಿಂದ ಅವನನ್ನು ಹೊರದೂಡತಕ್ಕದ್ದಲ್ಲ.

(2) ಈ ಅಧಿನಿಯಮವು ಪ್ರಾರಂಭವಾದ ಅನಂತರ, ಅಂಥ ಯಾವನೇ ವ್ಯಕ್ತಿಯನ್ನು ಸಾಲದಾತನು (1)ನೇ ಉಪಪ್ರಕರಣದಲ್ಲಿ ಹೇಳಿರುವಂತಹ ಯಾವುದೇ ಹೊಲಮನೆ ಅಥವಾ ಇತರ ನಿವಾಸದ ಆವರಣಗಳಿಂದ ಅವನನ್ನು ಹೊರದೂಡಿದರೆ, ಅಂಥ ಹೊಲಮನೆ ಅಥವಾ ನಿವಾಸದ ಆವರಣವು ಇರುವ ಉಪ ವಿಭಾಗದ ಆಡಳಿತವನ್ನು ಹೊಂದಿರುವ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಆದಷ್ಟು ಬೇಗನೆ, ಅಂತಹ ಹೊಲಮನೆ ಅಥವಾ ಇತರ ನಿವಾಸದ ಆವರಣದ ಸ್ವಾಧೀನವನ್ನು ಜೀತ ಕಾರ್ಮಿಕನಿಗೆ ವಾಪಸು ಕೊಡಿಸತಕ್ಕದ್ದು.

**9. ಅಳಿದುಹೋದ ಋಣದ ಬಗ್ಗೆ ಸಾಲದಾತನು ಯಾವ ಹಣವನ್ನೂ ಸ್ವೀಕರಿಸತಕ್ಕದ್ದಲ್ಲ**
**Creditor not to accept Payment against extinguished Debt.:**

(1) ಈ ಅಧಿನಿಯಮದ ಉಪಬಂಧಗಳ ಮೂಲಕ ಅಳಿದುಹೋದ ಅಥವಾ ಅಳಿದುಹೋಗಿದೆ ಎಂದು ಭಾವಿಸಲಾದ ಅಥವಾ ಪೂರ್ಣವಾಗಿ ತೀರಿಸಲಾಗಿದೆ ಎಂದು ಭಾವಿಸಿದ ಯಾವುದೇ ಜೀತ ಋಣಕ್ಕೆ ಸಂಬಂಧಪಟ್ಟಂತೆ ಯಾವ ಸಾಲದಾತನೂ



ಯಾವುದೇ ಹಣ ಸಂದಾಯವನ್ನು ಸ್ವೀಕರಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಲಾದ ಯಾವನೇ ವ್ಯಕ್ತಿಯೂ ಮೂರು ವರ್ಷಗಳವರೆಗಿನ ಕಾರಾವಾಸ ದಂಡನೆಯಿಂದ ಮತ್ತು ಜುಲ್ಮಾನೆಯಿಂದಲೂ ದಂಡನೆಗೆ ಗುರಿಯಾಗತಕ್ಕದ್ದು.

(3) (2)ನೇ ಉಪಪ್ರಕರಣದ ಪ್ರಕಾರ ಯಾವನೇ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು ಈ ಉಪಪ್ರಕರಣದ ಪ್ರಕಾರ ವಿಧಿಸಬಹುದಾದ ದಂಡಗಳ ಜೊತೆಗೆ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಪಡೆದುಕೊಂಡಿದ್ದ ಮೊಬಲಗನ್ನು ಜೀತ ಕಾರ್ಮಿಕನಿಗೆ ವಾಪಸು ಮಾಡುವ ಸಲುವಾಗಿ ಆದೇಶದಲ್ಲಿ ನಿರ್ದಿಷ್ಟವಾಗಿ ಹೇಳಬಹುದಾದ ಅವಧಿಯ ಒಳಗೆ ನ್ಯಾಯಾಲಯದಲ್ಲಿ ಜಮೇ ಮಾಡಬೇಕೆಂದು ಆ ವ್ಯಕ್ತಿಗೆ ಆದೇಶಿಸಬಹುದು.

**10. ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿರ್ದಿಷ್ಟವಾಗಿ ನಿಗದಿಪಡಿಸಬಹುದಾದ ಪ್ರಾಧಿಕಾರಿಗಳು**
**Authorities who may be specified for Implementing the Provisions of this Act:**

ಈ ಅಧಿನಿಯಮದ ಉಪಬಂಧಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಗತ್ಯವಿರಬಹುದಾದಂತಹ ಅಧಿಕಾರಗಳನ್ನು ರಾಜ್ಯ ಸರ್ಕಾರವು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಪ್ರದಾನ ಮಾಡಬಹುದು ಮತ್ತು ಅಂತಹ ಕರ್ತವ್ಯಗಳನ್ನು ಅವನಿಗೆ ವಿಧಿಸಬಹುದು ಮತ್ತು ಹಾಗೆ ಪ್ರದಾನ ಮಾಡಿದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಮತ್ತು ವಿಧಿಸಲಾದ ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ತನಗೆ ಅಧೀನನಾದ ಅಧಿಕಾರಿಯನ್ನು ಮತ್ತು ಹಾಗೆ ನಿರ್ದಿಷ್ಟವಾಗಿ ಹೇಳಲಾದ ಅಧಿಕಾರಿಯು, ಅಂಥ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಸ್ಥಳೀಯ ಪರಿಮಿತಿಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟನು ನಿರ್ದಿಷ್ಟಪಡಿಸಬಹುದು.

**11. ಸಾಲ ಸೌಲಭ್ಯವು ದೊರಕುವಂತೆ ನೋಡಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತಿತರ ಅಧಿಕಾರಿಗಳ ಕರ್ತವ್ಯ**
**Duty of District Magistrate and other Officers to ensure Credit:**

10ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಪ್ರಾಧಿಕಾರ ನೀಡಿದ ಜಿಲ್ಲಾ ಮ್ಯಾಜಿಸ್ಟ್ರೇಟನು ಮತ್ತು ಈ ಪ್ರಕರಣದ ಪ್ರಕಾರ ಜಿಲ್ಲಾ ಮ್ಯಾಜಿಸ್ಟ್ರೇಟನು ನಿರ್ದಿಷ್ಟಪಡಿಸಿದಂತಹ ಅಧಿಕಾರಿಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಜೀತ ವಿಮುಕ್ತಿ ಪಡೆದ ಜೀತ ಕಾರ್ಮಿಕನು ಮುಂದೆ ಯಾವುದೇ ಜೀತದ ಋಣವನ್ನು ಮಾಡಿಕೊಳ್ಳದಂತೆ

ಮತ್ತು ಆ ಬಗ್ಗೆ ಕರಾರು ಮಾಡಿಕೊಳ್ಳುವ ಯಾವುದೇ ಪ್ರಸಂಗ ಅಥವಾ ಕಾರಣ ಉಂಟಾಗದ ಹಾಗೆ ಅವನ ಆರ್ಥಿಕ ಹಿತಾಸಕ್ತಿಗಳನ್ನು ಭದ್ರಪಡಿಸುವ ಮತ್ತು ಸಂರಕ್ಷಿಸುವ ಮೂಲಕ ಅವನ ಕ್ಷೇಮಾಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸತಕ್ಕದ್ದು.

**12. ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನಿಂದ ಪ್ರಾಧಿಕಾರ ಪಡೆದ ಅಧಿಕಾರಿಗಳ ಕರ್ತವ್ಯ**

**Duty of District Magistrate and Officers authorised by Him:**

ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನು 10ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟವಾಗಿ ಹೇಳಿದ ಅಧಿಕಾರಿಯ ಸ್ಥಳೀಯ ಪರಿಮಿತಿಗಳ ಒಳಗೆ ವಾಸಿಸುವಂತಹ ಯಾವನೇ ವ್ಯಕ್ತಿಯು ಅಥವಾ ಅವನ ಪರವಾಗಿ ಯಾರಾದರೂ ಯಾವುದೇ ಜೀತ ಕಾರ್ಮಿಕ ಪದ್ಧತಿಯನ್ನು ಅಥವಾ ಯಾವುದೇ ಇತರ ಪ್ರಕಾರದ ಬಲಾತ್ಕಾರದ ದುಡಿಮೆಯನ್ನು ಈ ಅಧಿನಿಯಮದ ಪ್ರಾರಂಭದ ತರುವಾಯ ಯಾವನಾದರೂ ಆಚರಿಸುತ್ತಿದ್ದಾನೆಯೇ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ವಿಚಾರಿಸುವುದು. ಅಂಥ ಪ್ರತಿಯೊಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನು ನಿರ್ದಿಷ್ಟವಾಗಿ ಹೇಳಿದ ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅಂತಹ ವಿಚಾರಣೆಯ ಪರಿಣಾಮವಾಗಿ ಯಾವನೇ ವ್ಯಕ್ತಿಯು ಜೀತ ಕಾರ್ಮಿಕ ಪದ್ಧತಿಯನ್ನು, ಅಥವಾ ಬಲಾತ್ಕಾರದ ದುಡಿಮೆಯ ಇತರ ಯಾವುದೇ ಪದ್ಧತಿಯನ್ನು ಆಚರಿಸುತ್ತಿರುವುದು ಕಂಡುಬಂದರೆ, ಅವನು ಕೂಡಲೇ ಅಂತಹ ಬಲತ್ಕಾರದ ದುಡಿಮೆಯ ಆಚರಣೆಯನ್ನು ನಿರ್ಮೂಲ ಮಾಡಲು ಅವಶ್ಯಕವಾಗಬಹುದಾದಂತಹ ಕ್ರಮವನ್ನು ಕೈಗೊಳ್ಳತಕ್ಕದ್ದು.

**13. ಜಾಗೃತಾ ಸಮಿತಿಗಳು**

**Vigilance Committees:**

(1) ಪ್ರತಿಯೊಂದು ರಾಜ್ಯ ಸರ್ಕಾರವೂ ಸರ್ಕಾರಿ ರಾಜ್ಯ ಪತ್ರದಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸುವ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ಉಪವಿಭಾಗದಲ್ಲಿ ತಾನು ಸೂಕ್ತವೆಂದು ಆಲೋಚಿಸಬಹುದಾದ ಸಂಖ್ಯೆಯ ಜಾಗೃತಾ ಸಮಿತಿಗಳನ್ನು ರಚಿಸತಕ್ಕದ್ದು.

(2) ಜಿಲ್ಲೆಗಾಗಿ ರಚಿಸಲಾದ ಪ್ರತಿಯೊಂದು ಜಾಗೃತ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು ಎಂದರೆ,–

(ಎ) ಜಿಲ್ಲಾ ಮ್ಯಾಜಿಸ್ಟ್ರೇಟ್, ಅಥವಾ ಅವರು ನಾಮ ನಿರ್ದೇಶನ ಮಾಡುವ ಒಬ್ಬ ವ್ಯಕ್ತಿಯು ಅಂತಹ ಜಾಗೃತ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು;

(ಬಿ) ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಮತ್ತು ಆ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಾಗೂ ಆ ಜಿಲ್ಲಾ ಮ್ಯಾಜಿಸ್ಟ್ರೇಟ್, ಅವರಿಂದ ನಾಮ ನಿರ್ದೇಶಿತರಾದ ಮೂವರು ವ್ಯಕ್ತಿಗಳು;



(ಸಿ) ಅದೇ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್, ಅವರಿಂದ ನಾಮ ನಿರ್ದೇಶಿತರಾದ ಇಬ್ಬರು ಸಮಾಜ ಸೇವಕರು;

(ಡಿ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಜಿಲ್ಲೆಯಲ್ಲಿನ ಸರ್ಕಾರಿ ಅಥವಾ ಸರ್ಕಾರೇತರ ಏಜನ್ಸಿಗಳನ್ನು ಪ್ರತಿನಿಧಿಸಲು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಮೂವರನ್ನು ಮೀರದ ವ್ಯಕ್ತಿಗಳು;

(ಇ) ಜಿಲ್ಲೆಯಲ್ಲಿನ ಹಣಕಾಸು ಮತ್ತು ಸಾಲ ನೀಡಿಕೆ ಸಂಸ್ಥೆಗಳನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ ಇವರನ್ನು ಜಿಲ್ಲಾ ಮ್ಯಾಜಿಸ್ಟ್ರೇಟನು ನಾಮ ನಿರ್ದೇಶನ ಮಾಡಬೇಕು.

(3) ಉಪ-ವಿಭಾಗಕ್ಕಾಗಿ ರಚಿಸಿದ ಪ್ರತಿಯೊಂದು ಜಾಗೃತಾ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು, ಎಂದರೆ,–

(ಎ) ಉಪವಿಭಾಗದ ಮ್ಯಾಜಿಸ್ಟ್ರೇಟ್ ಅಥವಾ ಅವರು ನಾಮ ನಿರ್ದೇಶನ ಮಾಡುವಂತಹ ಒಬ್ಬ ವ್ಯಕ್ತಿಯು ಅಧ್ಯಕ್ಷರಾಗಿರತಕ್ಕದ್ದು.

(ಬಿ) ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಮತ್ತು ಆ ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಉಪವಿಭಾಗ ಮ್ಯಾಜಿಸ್ಟ್ರೇಟ್‌ರಿಂದ ನಾಮ ನಿರ್ದೇಶನ ಮಾಡಿದಂತಹ ಮೂವರು ವ್ಯಕ್ತಿಗಳು;

(ಸಿ) ಅದೇ ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಉಪವಿಭಾಗದ ಮ್ಯಾಜಿಸ್ಟ್ರೇಟ್ ಅವರು ನಾಮ ನಿರ್ದೇಶನ ಮಾಡತಕ್ಕ ಇಬ್ಬರು ಸಮಾಜ ಸೇವಕರು;

(ಡಿ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಅದೇ ಉಪವಿಭಾಗದಲ್ಲಿ ಇರುವ ಸರ್ಕಾರಿ ಅಥವಾ ಸರ್ಕಾರೇತರ ಏಜನ್ಸಿಗಳನ್ನು ಪ್ರತಿನಿಧಿಸಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ನಾಮ ನಿರ್ದೇಶನ ಮಾಡತಕ್ಕ ಮೂವರನ್ನು ಮೀರದಂತಹ ವ್ಯಕ್ತಿಗಳು;

(ಇ) ಅದೇ ಉಪವಿಭಾಗದಲ್ಲಿರುವ ಹಣಕಾಸು ಮತ್ತು ಸಾಲ ನೀಡಿಕೆ ಸಂಸ್ಥೆಗಳನ್ನು ಪ್ರತಿನಿಧಿಸಲು ಉಪವಿಭಾಗ ಮ್ಯಾಜಿಸ್ಟ್ರೇಟ್ ಅವರು ನಾಮ ನಿರ್ದೇಶನ ಮಾಡತಕ್ಕ ಒಬ್ಬ ವ್ಯಕ್ತಿ;

(ಎಫ್) 10ನೇ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಮತ್ತು ಅದೇ ಉಪವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ಅಧಿಕಾರಿ.

(4) ಪ್ರತಿಯೊಂದು ಜಾಗೃತ ಸಮಿತಿಯು ತನ್ನ ಕಾರ್ಯ ವಿಧಾನವನ್ನು ತಾನೇ ವಿನಿಯಮಿಸಿಕೊಳ್ಳತಕ್ಕದ್ದು ಮತ್ತು ತನಗೆ ಅವಶ್ಯವಾದ ಲಿಪಿಕ ಸಿಬ್ಬಂದಿ ನೆರವನ್ನು,–

(ಎ) ಜಿಲ್ಲೆಗಾಗಿ ರಚಿಸಲಾದ ಜಾಗೃತ ಸಮಿತಿಗಳ ಸಂಬಂಧದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು;

(ಬಿ) ಉಪವಿಭಾಗಕ್ಕಾಗಿ ರಚಿಸಲಾದ ಜಾಗೃತ ಸಮಿತಿಯ ಸಂದರ್ಭದಲ್ಲಿ ಉಪವಿಭಾಗ

ಮ್ಯಾಜಿಸ್ಟ್ರೇಟ್ ಅವರು ಒದಗಿಸತಕ್ಕದ್ದು.

(5) ಜಾಗ್ರತ ಸಮಿತಿಯ ಯಾವ ವ್ಯವಹರಣೆಯು ಜಾಗ್ರತ ಸಮಿತಿಯ ರಚನೆಯಲ್ಲಿ ಅಥವಾ ಅದರ ನಡವಳಿಕೆಯಲ್ಲಿ ಇರಬಹುದಾದ ಯಾವುದೇ ದೋಷದ ಕಾರಣ ಮಾತ್ರದಿಂದಲೇ ಅನೂರ್ಜಿತವಾಗತಕ್ಕದ್ದಲ್ಲ.

**14. ಜಾಗ್ರತ ಸಮಿತಿಯ ಪ್ರಕಾರ್ಯಗಳು**
**Functions of Vigilance Committees:**

(1) ಪ್ರತಿಯೊಂದು ಜಾಗ್ರತ ಸಮಿತಿಯ ಪ್ರಕಾರ್ಯಗಳು ಈ ಮುಂದೆ ಹೇಳಿರುವಂತೆ ಇರತಕ್ಕದ್ದು,-

(ಎ) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಖಚಿತಪಡಿಸಿ ನೋಡಿಕೊಳ್ಳುವ ಬಗ್ಗೆ ಮಾಡಬೇಕಾದ ಪ್ರಯತ್ನಗಳ ಬಗ್ಗೆ ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಅವರು ಈ ಬಗ್ಗೆ ಪ್ರಾಧಿಕಾರವನ್ನು ನೀಡಿರುವಂತಹ ಯಾವುದೇ ಅಧಿಕಾರಿಗೆ ಸಲಹೆಗಳನ್ನು ನೀಡುವುದು;

(ಬಿ) ಜೀತ ವಿಮುಕ್ತರಾದ ಜೀತ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಮರು ಸ್ಥಾಪನೆಗಾಗಿ ಅವಕಾಶಗಳನ್ನು ಕಲ್ಪಿಸುವುದು;

(ಸಿ) ಜೀತ ವಿಮುಕ್ತರಾದ ಜೀತ ಕಾರ್ಮಿಕರಿಗೆ ಸಾಕಷ್ಟು ಸಾಲ ಸೌಲಭ್ಯಗಳು ದೊರಕುವಂತೆ ಮಾಡುವ ದೃಷ್ಟಿಯಿಂದ ಗ್ರಾಮೀಣ ಬ್ಯಾಂಕುಗಳ ಮತ್ತು ಸಹಕಾರ ಸಂಘಗಳ ಕೆಲಸ ಕಾರ್ಯಗಳನ್ನು ಸಮನ್ವಯಗೊಳಿಸುವುದು;

(ಡಿ) ಈ ಅಧಿನಿಯಮದ ಅಡಿಯಲ್ಲಿ ಸಂಜ್ಞಾನಕ್ಕೆ ತೆಗೆದುಕೊಳ್ಳಲಾದ ಯಾವುದೇ ಅಪರಾಧಗಳ ಸಂಖ್ಯೆಯ ಮೇಲೆ ನಿಗಾ ಇಡುವುದು;

(ಇ) ಈ ಅಧಿನಿಯಮದ ಅಡಿಯಲ್ಲಿ ಸಂಜ್ಞಾನಕ್ಕೆ ತೆಗೆದುಕೊಳ್ಳಬೇಕಾದ ಅಪರಾಧಗಳು ಯಾವುದಾದರೂ ಇವೆಯೇ ಎಂಬುದರ ಸಮೀಕ್ಷೆಯನ್ನು ನಡೆಸುವುದು;

(ಎಫ್) ಜೀತ ವಿಮುಕ್ತನಾದ ಜೀತ ಕಾರ್ಮಿಕನ ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಯ ವಿರುದ್ಧ ಅಥವಾ ಅವನ ಮೇಲೆ ಅವಲಂಬಿತನಾದ ಇತರ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ಜೀತದ ಪೂರ್ತಿ ಸಾಲವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಜೀತದ ಸಾಲವೆಂದು ಅಂಥ ವ್ಯಕ್ತಿಯು ಕ್ಲೇಮು ಮಾಡಿದ ಇತರ ಯಾವುದೇ ಸಾಲವನ್ನು ವಸೂಲು ಮಾಡಲು ಹೂಡಿದ ಯಾವುದೇ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದವನ್ನು ಹೂಡುವುದು.



(2) ಜೀತ ವಿಮುಕ್ತನಾದ ಜೀತ ಕಾರ್ಮಿಕನ ವಿರುದ್ಧ ಹೂಡಿದ ದಾವೆಯಲ್ಲಿ ಅವನ ಪರವಾಗಿ ಪ್ರತಿರಕ್ಷಣೆಯ ವಾದವನ್ನು ನಡೆಸಲು ಜಾಗ್ರತ ಸಮಿತಿಯು ತನ್ನ ಸದಸ್ಯರಲ್ಲಿ ಯಾರಿಗಾದರೂ ಒಬ್ಬರಿಗೆ ಪ್ರಾಧಿಕಾರವನ್ನು ನೀಡಬಹುದು ಮತ್ತು ಹಾಗೆ ಪ್ರಾಧಿಕಾರವನ್ನು ಹೊಂದಿದ ಸದಸ್ಯನನ್ನು ಅಂಥ ದಾವೆಯ ಉದ್ದೇಶಕ್ಕಾಗಿ ಹಾಗೆ ಜೀತ ವಿಮುಕ್ತನಾದ ಜೀತ ಕಾರ್ಮಿಕನ ಅಧಿಕೃತ ಏಜಂಟನೆಂದು ಭಾವಿಸತಕ್ಕದ್ದು.

**15. ರುಜುವಾತಿನ ಹೊಣೆ**
**Burden of Proof:**

ಜೀತ ಕಾರ್ಮಿಕ ಅಥವಾ ಜಾಗ್ರತ ಸಮಿತಿಯು ಯಾವುದೇ ಸಾಲವನ್ನು ಜೀತ ಸಾಲವೆಂದು ಕ್ಲೇಮು ಮಾಡಿದಾಗ ಅಂತಹ ಸಾಲವು ಜೀತ ಸಾಲವಲ್ಲವೆಂದು ರುಜುವಾತುಪಡಿಸುವ ಹೊಣೆಯು ಸಾಲದಾತನ ಮೇಲೆ ಇರತಕ್ಕದ್ದು.

**16. ಜೀತ ಕಾರ್ಮಿಕ ಪದ್ಧತಿಯ ಆಚರಣೆ ಮಾಡಿದ್ದಕ್ಕಾಗಿ ದಂಡನೆ**
**Punishment for Enforcement of Bonded Labour:**

ಈ ಅಧಿನಿಯಮವು ಪ್ರಾರಂಭವಾದ ಅನಂತರ ಜೀತ ಕಾರ್ಮಿಕನಾಗಿ ದುಡಿಯುವಂತೆ ಯಾವನೇ ವ್ಯಕ್ತಿಯನ್ನು ಯಾರಾದರೂ ಒತ್ತಾಯಪಡಿಸಿದರೆ, ಒತ್ತಾಯಪಡಿಸಿದ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡನೀಯನಾಗತಕ್ಕದ್ದು.

**17. ಜೀತ ಸಾಲವನ್ನು ಕೊಟ್ಟರೆ ದಂಡನೆ**
**Punishment for Advancement of Bonded Debt:**

ಈ ಅಧಿನಿಯಮವು ಪ್ರಾರಂಭವಾದ ಅನಂತರ ಯಾವನೇ ವ್ಯಕ್ತಿಯು ಜೀತ ಸಾಲವನ್ನು ಕೊಟ್ಟರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೆಗೆ ಗುರಿಯಾಗತಕ್ಕದ್ದು.

**18. ಜೀತ ಕಾರ್ಮಿಕ ಪದ್ಧತಿಯ ಅಡಿಯಲ್ಲಿ ಜೀತ ದುಡಿಮೆಯನ್ನು ಒತ್ತಾಯದಿಂದ ಪಡೆದುಕೊಳ್ಳುವುದಕ್ಕೆ ದಂಡನೆ**
**Punishment for Extracting Bonded Labour under the Bonded Labour System:**

ಈ ಅಧಿನಿಯಮವು ಪ್ರಾರಂಭವಾದ ಅನಂತರ ಯಾವನೇ ವ್ಯಕ್ತಿಯು ಯಾವುದೇ ರೂಢಿ, ಸಂಪ್ರದಾಯ, ಕರಾರು, ಒಪ್ಪಂದ ಅಥವಾ ಇತರ ಕಾಗದ ಪತ್ರದ ಆಧಾರದ ಮೇಲೆ ಸೇವೆ ಸಲ್ಲಿಸಲು ಯಾವನೇ ವ್ಯಕ್ತಿಯನ್ನು ಅಥವಾ ಅವನ ಕುಟುಂಬದ ಯಾವನೇ ಸದಸ್ಯನನ್ನು ಅಥವಾ ಅವನನ್ನು ಅವಲಂಬಿಸಿರುವ ಯಾವನೇ ಇತರ

ವ್ಯಕ್ತಿಯನ್ನು ಜೀತ ಕಾರ್ಮಿಕ ಪದ್ಧತಿಯ ಪ್ರಕಾರ ಯಾವುದೇ ಸೇವೆಯನ್ನು ಸಲ್ಲಿಸಲು ಅಗತ್ಯಪಡಿಸಿದರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಯು ವಸೂಲಾದರೆ ಜೀತದಾಳಿನಿಂದ ಒತ್ತಾಯಪೂರ್ವಕವಾಗಿ ಪಡೆದ ಜೀತ ದುಡಿಮೆಯ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳ ಸಂದಾಯದ ದರದಂತೆ ಅವನಿಗೆ ಅದರಿಂದ ಸಂದಾಯ ಮಾಡತಕ್ಕದ್ದು.

**19. ಜೀತ ಕಾರ್ಮಿಕರಿಗೆ ಅವರ ಆಸ್ತಿಯ ಸ್ವಾಧೀನವನ್ನು ವಾಪಸು ಮಾಡಲು ತಪ್ಪಿದ್ದಕ್ಕಾಗಿ ಅಥವಾ ವಿಫಲನಾದುದಕ್ಕಾಗಿ ದಂಡನೆ**
**Punishment for Ommission or Failure to Restore Possession of Property to Bonded Labourers:**

ಈ ಅಧಿನಿಯಮದ ಅಡಿಯಲ್ಲಿ ಯಾವನೇ ಜೀತ ಕಾರ್ಮಿಕನಿಗೆ ಅವನ ಆಸ್ತಿಯನ್ನು ವಾಪಸ್ಸು ಮಾಡಬೇಕಾದದ್ದು ಅಗತ್ಯವಾಗಿದ್ದು, ಯಾವನೇ ವ್ಯಕ್ತಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯ ಒಳಗೆ ಹಾಗೆ ವಾಪಸು ಮಾಡಲು ವಿಫಲನಾದರೆ ಅಥವಾ ತಪ್ಪಿದರೆ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಯಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೆಗೆ ಗುರಿಯಾಗತಕ್ಕದ್ದು. ಮತ್ತು ಜುಲ್ಮಾನೆಯು ವಸೂಲಾದ ಜೀತ ಕಾರ್ಮಿಕನಿಗೆ ಸ್ವತ್ತಿನ ಸ್ವಾಧೀನವನ್ನು ವಾಪಸು ಮಾಡದೇ ಇದ್ದ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳ ಸಂದಾಯದ ದರದಂತೆ ಆ ಹಣದಿಂದ ಅವನಿಗೆ ಪರಿಹಾರ ಹಣವನ್ನು ಸಂದಾಯ ಮಾಡತಕ್ಕದ್ದು.

**20. ದುಷ್ಪ್ರೇರಣೆಯು ಅಪರಾಧವಾಗಿರತಕ್ಕದ್ದು**
**Abetment to bean Offence:**

ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡುವಂತೆ ದುಷ್ಪ್ರೇರಣೆ ನೀಡುವ ಯಾವನೇ ವ್ಯಕ್ತಿಯು ಹಾಗೆ ದುಷ್ಪ್ರೇರಣೆಯನ್ನು ಮಾಡಿರುವಂತಹ ಅಪರಾಧವನ್ನು ಮಾಡಿರಲಿ ಅಥವಾ ಇಲ್ಲದೇ ಇರಲಿ ದುಷ್ಪ್ರೇರಣೆ ಮಾಡಿದ ಅಪರಾಧಕ್ಕಾಗಿ ಉಪಬಂಧ ಕಲ್ಪಿಸಿರುವ ದಂಡನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

**ವಿವರಣೆ Explanation:** ಈ ಅಧಿನಿಯಮದ ಉದ್ದೇಶಕ್ಕಾಗಿ 'ದುಷ್ಪ್ರೇರಣೆ' ಎಂಬುದಕ್ಕೆ ಭಾರತ ದಂಡ ಸಂಹಿತೆ (1860ರ 45) ಯಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.



**21. ಕಾರ್ಯ ನಿರ್ವಾಹಕ ದಂಡಾಧಿಕಾರಿಯಿಂದ ವಿಚಾರಣೆಗೊಳಪಡಿಸಬಹುದಾದ ಅಪರಾಧಗಳು**
**Offences to be tried by Executive Magistrates:**

(1) ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳನ್ನು ವಿಚಾರಣೆ ಮಾಡುವುದಕ್ಕಾಗಿ ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟ್ ಅವರಿಗೆ ಮೊದಲನೇ ದರ್ಜೆಯ ಅಥವಾ ಎರಡನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಇರುವಂತಹ ಅಧಿಕಾರಗಳನ್ನು ರಾಜ್ಯ ಸರ್ಕಾರವು ಕೊಡಬಹುದು. ಮತ್ತು ಆ ರೀತಿಯಲ್ಲಿ ಅಧಿಕಾರವನ್ನು ಕೊಟ್ಟಿರುವಂತಹ ಕಾರಣದಿಂದ ಹಾಗೆ ಅಧಿಕಾರವನ್ನು ಪಡೆದ ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟನನ್ನು ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ 2) ಉದ್ದೇಶಕ್ಕಾಗಿ ಸಂದರ್ಭಾನುಸಾರ ಮೊದಲನೇ ದರ್ಜೆಯ ಅಥವಾ ಎರಡನೇ ದರ್ಜೆಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಎಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಮ್ಯಾಜಿಸ್ಟ್ರೇಟನು ಕ್ಷಿಪ್ರವಾಗಿ ಅಧಿವಿಚಾರಣೆ ನಡೆಸತಕ್ಕದ್ದು.

**22. ಅಪರಾಧಗಳ ಸಂಜ್ಞೇಯತೆ**
**Cognizance of Offences:**

ಈ ಅಧಿನಿಯಮದ ಅಡಿಯಲ್ಲಿನ ಪ್ರತಿಯೊಂದು ಅಪರಾಧವೂ ಸಂಜ್ಞೇಯ ಅಪರಾಧವಾಗಿರತಕ್ಕದ್ದು ಮತ್ತು ಅದು ಜಾಮೀನು ಪಡೆಯಬಹುದಾದದ್ದಾಗಿರತಕ್ಕದ್ದು.

**23. ಕಂಪನಿಗಳಿಂದ ಅಪರಾಧಗಳು**
**Offences by Companies:**

(1) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಆಡಳಿತ ನಿರ್ವಹಣೆಯ ಹೊಣೆಯನ್ನು ಹೊಂದಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಹಾಗೂ ಕಂಪನಿಯು ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅದಕ್ಕೆ ಅನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

(2) (1) ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ಯಾವುದೇ ನಿರ್ಲಕ್ಷತೆಯಿಂದಾಗಿ ನಡೆಯಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಆ

ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರು ಕಾನೂನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ Explanation:** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) **"ಕಂಪನಿ"** ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘಟನೆಯನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಿಸಿದಂತೆ ಹಾಗೆ "ಆದೇಶ" ವಾದರೆ ಫರ್ಮಿನ ಪಾಲುದಾರ.

### 24. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ Protection of Action taken in Good Faith:

ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಯಾವುದೇ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವನೇ ಅಧಿಕಾರಿ ಅಥವಾ ಜಾಗೃತ ಸಮಿತಿಯ ಯಾವನೇ ಸದಸ್ಯನ ವಿರುದ್ಧ ಹೂಡಲು ಅವಕಾಶವಿರತಕ್ಕದ್ದಲ್ಲ.

### 25. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ Jurisdiction of Civil Courts barred:

ಈ ಅಧಿನಿಯಮದ ಯಾವುದೇ ಉಪಬಂಧವು ಅನ್ವಯಿಸುವಂಥ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ. ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯವು ಯಾವುದೇ ನಿರ್ಬಂಧಕಾಜ್ಞೆಯನ್ನು ಕೊಡತಕ್ಕದ್ದಲ್ಲ.

### 26. ನಿಯಮ ರಚನಾಧಿಕಾರ Power to make Rules:

(1) ಕೇಂದ್ರ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಮೊದಲು ಹೇಳಿದ ಅಧಿಕಾರಕ್ಕೆ ಧಕ್ಕೆ ಬಾರದಂತೆ ಅಂಥ ನಿಯಮಗಳು ಈ ಕೆಳಗಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ,–



(ಎ) 6ನೇ ಪ್ರಕರಣದ (4)ನೇ ಅಥವಾ (5)ನೇ ಉಪಪ್ರಕರಣದಲ್ಲಿ ಹೇಳಲಾದ ಸ್ವತ್ತನ್ನು ವಾಪಸ್ಸು ಕೊಡುವ ಬಗ್ಗೆ ಆ ಪ್ರಕರಣದ (6)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಯಾವ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬೇಕಾಗಿದೆಯೋ ಆ ಪ್ರಾಧಿಕಾರ;

(ಬಿ) ನೇಮಿಸಲಾದ ಪ್ರಾಧಿಕಾರಕ್ಕೆ 6ನೇ ಪ್ರಕರಣ (6)ನೇ ಉಪಪ್ರಕರಣದ ಮೇರೆಗೆ ಸ್ವತ್ತಿನ ಸ್ವಾಧೀನವನ್ನು ವಾಪಸು ಕೊಡಿಸುವುದಕ್ಕಾಗಿ ಅರ್ಜಿಯನ್ನು ಯಾವ ಕಾಲದೊಳಗಾಗಿ ಸಲ್ಲಿಸಬೇಕಾಗಿದೆಯೋ ಆ ಕಾಲ;

(ಸಿ) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದರ ಬಗ್ಗೆ ಖಾತರಿ ಮಾಡಿಕೊಳ್ಳಲು 14ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿ ಜಾಗೃತ ಸಮಿತಿಯು ಕೈಗೊಳ್ಳಬೇಕಾದ ಕ್ರಮಗಳು;

(ಡಿ) ನಿಯಮಿಸಬಹುದಾದ ಅಥವಾ ನಿಯಮಿಸಬೇಕಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು, ಮತ್ತು ಆ ಅವಧಿಯು ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕೂ ಹೆಚ್ಚು ಅಧಿವೇಶನಗಳನ್ನು ಒಳಗೊಳ್ಳಬಹುದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದರೊಂದರ ಮೇಲೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯದ ಮೊದಲು ಈ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರ ಪರಿಣಾಮಕ್ಕೆ ಬರತಕ್ಕದ್ದು ಅಥವಾ ಪರಿಣಾಮಕ್ಕೆ ಬರತಕ್ಕದ್ದಲ್ಲ. ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಈ ನಿಯಮದ ಪ್ರಕಾರ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

### 27. ನಿರಸನ ಮತ್ತು ಉಳಿಸುವಿಕೆ Repeal and Saving:

(1) ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನ) ಅಧ್ಯಾದೇಶ, 1975 (1975ರ 17) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸನವಾಗಿದ್ದಾಗ್ಯೂ, ಈ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಕೈಗೊಂಡ ಯಾವುದೇ ಕ್ರಮ (ಪ್ರಕಟಿಸಿರುವ ಯಾವುದೇ ನಿರ್ದೇಶನ ಅಥವಾ ನಾಮ ನಿರ್ದೇಶನ, ಕೊಡಲಾದ ಯಾವುದೇ ಅಧಿಕಾರ, ವಿಧಿಸಲಾದ ಯಾವುದೇ ಕರ್ತವ್ಯ ಅಥವಾ ನಿರ್ದಿಷ್ಟಪಡಿಸಲಾದ ಯಾವನೇ ಅಧಿಕಾರಿ ಇವನ್ನೆಲ್ಲಾ ಒಳಗೊಂಡತೆ) ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಅದನ್ನು ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬಂತೆ ಭಾವಿಸತಕ್ಕದ್ದು.

* * *



# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ನಿಯಮಗಳು, 1976

# BONDED LABOUR SYSTEM (ABOLITION) RULES, 1976

# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ನಿಯಮಗಳು, 1976
# BONDED LABOUR SYSTEM (ABOLITION) RULES, 1976

ಪರಿವಿಡಿ


| ಕ್ರ.ಸಂ. | | ಪು.ಸಂ. |
|---|---|---|
| 1. | ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ<br>Short Title and Commencement | 27 |
| 2. | ಪರಿಭಾಷೆ<br>Definitions | 28 |
| 3. | ಜಿಲ್ಲಾ ಜಾಗೃತ ಸಮಿತಿಯ ಸದಸ್ಯರ ಅಧಿಕಾರಾವಧಿ ಮತ್ತು ಅವರು ತಮ್ಮ ಸ್ಥಾನವನ್ನು ತೆರವು ಮಾಡುವುದು<br>Term of office, and vacation of seat of Members of District Vigilance Committee | 28 |
| 4. | ಉಪ-ವಿಭಾಗ ಜಾಗೃತ ಸಮಿತಿಗಳ ಸದಸ್ಯರ ಅಧಿಕಾರಾವಧಿ ಮತ್ತು ಅವರು ಸ್ಥಾನವನ್ನು ತೆರವು ಮಾಡುವುದು<br>Term of office, and vacation of seat, of Members of Sub-Divisional Vigilance Committee | 29 |
| 5. | 6ನೇ ಪ್ರಕರಣದ 6ನೇ ಉಪಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರ<br>Prescribed Authority under Sub-section (6) of Section 6 | 30 |
| 6. | 6ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕಾದ ಅವಧಿ<br>Time within which an Application under Sub-section (6) is to be made | 31 |
| 7. | ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳನ್ನು ಕಾರ್ಯಗತಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಜಿಲ್ಲಾ ಜಾಗೃತ ಸಮಿತಿಗಳು ಇಟ್ಟುಕೊಂಡು ಬರಬೇಕಾದ ದಾಖಲೆಗಳು<br>Records to be maintained by District Vigilance Committees to ensure the Implementation of the Provisions of the Act and Rules | 31 |




# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ನಿಯಮಗಳು, 1976

[ಜಿಎಸ್ಆರ್ 99(ಇ)]

# BONDED LABOUR SYSTEM (ABOLITION) RULES, 1976

(G.S.R. 99(E))

[ದಿನಾಂಕ: 28-03-1976]

ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976ರ (1976ರ 19) 26ನೇ ಪ್ರಕರಣದ (2)ನೇ ಉಪಪ್ರಕರಣದ ಜೊತೆಯಲ್ಲಿ ಓದಿಕೊಂಡ (1)ನೇ ಉಪಪ್ರಕರಣದ ಮೂಲಕ ಕೊಡಲಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ,-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**
**Short Title and Commencement:**

(1) ಈ ಅಧಿನಿಯಮಗಳನ್ನು ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ನಿಯಮಗಳು 1976 ಎಂದು ಕರೆಯತಕ್ಕದ್ದು.

(2) ಇವು ಸರ್ಕಾರ ರಾಜ್ಯ ಪತ್ರದಲ್ಲಿ ಅವನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆ**
**Definitions:**

ಈ ನಿಯಮಗಳಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಎ) **"ಅಧಿನಿಯಮ"** ಎಂದರೆ ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅದಿನಿಯಮದ 1976 (1976ರ 19);

(ಬಿ) **"ಜಿಲ್ಲಾ ಜಾಗೃತ ಸಮಿತಿ"** ಎಂದರೆ, 13ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸದರಿ ಜಿಲ್ಲೆಗಾಗಿ ರಚಿಸಲಾದ ಜಾಗೃತ ಸಮಿತಿ;

(ಸಿ) **"ಪ್ರಕರಣ"** ಎಂದರೆ, ಈ ಅಧಿನಿಯಮದ ಒಂದು ಪ್ರಕರಣ;

(ಡಿ) **"ಉಪ-ವಿಭಾಗ ಜಾಗೃತ ಸಮಿತಿ"** ಎಂದರೆ 13ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸದರಿ ಉಪವಿಭಾಗಕ್ಕಾಗಿ ರಚಿಸಲಾದ ಒಂದು ಜಾಗೃತ ಸಮಿತಿ.

**3. ಜಿಲ್ಲಾ ಜಾಗೃತ ಸಮಿತಿಯ ಸದಸ್ಯರ ಅಧಿಕಾರಾವಧಿ ಮತ್ತು ಅವರು ತಮ್ಮ ಸ್ಥಾನವನ್ನು ತೆರವು ಮಾಡುವುದು**

**Term of Office, and vacation of seat of Members of District Vigilance Committee:**

(1) 13ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ), (ಸಿ), (ಡಿ) ಮತ್ತು (ಇ) ಖಂಡದ ಅಡಿಯಲ್ಲಿ ನಾಮ ನಿರ್ದೇಶನ ಹೊಂದಿದ ಜಿಲ್ಲಾ ಜಾಗೃತ ಸಮಿತಿಯ ಪ್ರತಿಯೊಬ್ಬ ಸದಸ್ಯನೂ ಸರಕಾರಿ ರಾಜ್ಯ ಪತ್ರದಲ್ಲಿ ಅವನ ನಾಮ ನಿರ್ದೇಶನವನ್ನು ಅಧಿಸೂಚಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅಧಿಕಾರದಲ್ಲಿರತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯದಾದ ಅನಂತರ ತನ್ನ ಉತ್ತರಾಧಿಕಾರಿಯ ನಾಮ ನಿರ್ದೇಶನವಾಗುವವರೆಗೆ, ಅವನು ಅಧಿಕಾರದಲ್ಲಿ ಮುಂದುವರಿಯತಕ್ಕದ್ದು ಮತ್ತು ಮತ್ತೆ ನಾಮ ನಿರ್ದೇಶನಕ್ಕೆ ಸಹ ಅವನು ಅರ್ಹನಾಗತಕ್ಕದ್ದು.

(2) (1)ನೇ ಉಪನಿಯಮದಲ್ಲಿ ಹೇಳಲಾದ ಪ್ರತಿಯೊಬ್ಬ ಸದಸ್ಯನು,-

(ಎ) ತನ್ನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರಿಗೆ ಬರಹ ಮೂಲಕವಾಗಿ ಒಂದು ನೋಟೀಸನ್ನು ಕೊಟ್ಟು ತನ್ನ ಅಧಿಕಾರ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಅಂಥ ರಾಜೀನಾಮೆಯು ಸ್ವೀಕೃತವಾದ ಅನಂತರ, ಅವನು ತನ್ನ ಅಧಿಕಾರ ಸ್ಥಾನವನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕದ್ದು.

(ಬಿ) (i) ಜಿಲ್ಲಾ ಜಾಗೃತ ಸಮಿತಿಯು ಒಂದಾದ ಮೇಲೊಂದರಂತೆ ನಡೆದ ಮೂರು ಸಭೆಗಳಿಗೆ ಸಮಿತಿಯ ಅಧ್ಯಕ್ಷರಿಂದ ತನ್ನ ಗೈರು ಹಾಜರಿಯ ಬಗ್ಗೆ ಅನುಮತಿಯನ್ನು ಪಡೆಯದೆ ಹಾಜರಾಗಲು ತಪ್ಪಿದರೆ ಅವನು ತನ್ನ ಅಧಿಕಾರ ಸ್ಥಾನವನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕದ್ದು.

ಆದರೆ, ಅವನ ನಾಮ ನಿರ್ದೇಶನ ಮಾಡಿದ ಪ್ರಾಧಿಕಾರಕ್ಕೆ ಅಂಥ ಸದಸ್ಯನು ಸಮಿತಿಯು ಒಂದಾದ ಮೇಲೊಂದರಂತೆ ನಡೆದ ಮೂರು ಸಭೆಗಳಿಗೆ ಹಾಜರಾಗಲು ಸಾಕಷ್ಟು ಕಾರಣಗಳಿಂದ ಅಡ್ಡಿಯಾಯಿತೆಂಬ ಬಗ್ಗೆ ಮನದಟ್ಟಾದರೆ ಆ ಪ್ರಾಧಿಕಾರವು ಅವನಿಗೆ ಸದಸ್ಯತ್ವವನ್ನು ಪುನಃ ಕೊಡಬಹುದು.

(ii) ಕೆಳಕಂಡ ಯಾವುದೇ ಅನರ್ಹತೆಗಳಿಗೆ ಅವನು ಒಳಗಾದರೆ ಅವನು ತನ್ನ ಅಧಿಕಾರ ಸ್ಥಾನವನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕದ್ದು.

(1) ಅವನು ದಿವಾಳಿಯೆಂದು ಒಂದು ನ್ಯಾಯಾಲಯದಿಂದ ನಿರ್ಣಯಿಸಲ್ಪಟ್ಟರೆ;

(2) ಸಕ್ಷಮ ನ್ಯಾಯಾಲಯದಿಂದ ಅವನು ಅಸ್ವಸ್ಥಚಿತ್ತನೆಂದು ಘೋಷಿಸಲ್ಪಟ್ಟರೆ;

(3) ಅವನ ನಾಮ ನಿರ್ದೇಶನವನ್ನು ಮಾಡಿದ ಪ್ರಾಧಿಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನು ಒಳಗೊಳ್ಳುವ ಅಪರಾಧಕ್ಕಾಗಿ ಅವನು ಅಪರಾಧಿಯೆಂದು ನಿರ್ಣೀತನಾಗಿದ್ದರೆ;



(ಸಿ) ಅಂಥ ಸದಸ್ಯನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರವು ಯಾವ ಹಿತಾಸಕ್ತಿಯನ್ನು ಪ್ರತಿನಿಧಿಸಲು ಅವನನ್ನು ನಾಮ ನಿರ್ದೇಶನ ಮಾಡಲಾಗಿತ್ತೋ ಅಂಥ ಹಿತಾಸಕ್ತಿಯನ್ನು ಅವನು ಪ್ರತಿನಿಧಿಸುವುದು ಕೊನೆಗೊಂಡಿದೆಯೆಂದು ಅಭಿಪ್ರಾಯಪಟ್ಟರೆ, ಅವನನ್ನು ಆ ಅಧಿಕಾರ ಸ್ಥಾನದಿಂದ ತೆಗೆದುಹಾಕತಕ್ಕದ್ದು:

ಆದರೆ, ಹಾಗೆ ತೆಗೆದು ಹಾಕಲಾಗುವುದನ್ನು ವಿರೋಧಿಸಿ ಕಾರಣವನ್ನು ತೋರಿಸುವುದಕ್ಕೆ ಅವನಿಗೆ ಸೂಕ್ತ ಅವಕಾಶವನ್ನು ಕೊಟ್ಟ ಹೊರತು ಈ ಖಂಡದ ಅಡಿಯಲ್ಲಿ ಆ ಸದಸ್ಯನನ್ನು ಅವನ ಅಧಿಕಾರ ಸ್ಥಾನದಿಂದ ತೆಗೆದುಹಾಕತಕ್ಕದ್ದಲ್ಲ.

(3) ಆಕಸ್ಮಿಕವಾಗಿ ತೆರವಾಗಿರುವ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ನಾಮ ನಿರ್ದೇಶಿತನಾದ ಸದಸ್ಯನು ತನ್ನ ಹಿಂದಿನ ಸದಸ್ಯನು ಉಳಿದಿದ್ದ ಅವಧಿಯವರೆಗೆ ಅಧಿಕಾರ ಸ್ಥಾನದಲ್ಲಿರತಕ್ಕದ್ದು.

**4. ಉಪ-ವಿಭಾಗ ಜಾಗೃತ ಸಮಿತಿಗಳ ಸದಸ್ಯರ ಅಧಿಕಾರಾವಧಿ ಮತ್ತು ಅವರು ಸ್ಥಾನವನ್ನು ತೆರವು ಮಾಡುವುದು**

**Term of office, and vacation of seat, of Members of Sub-Divisional Vigilance Committee:**

(1) 13ನೇ ಪ್ರಕರಣದ (3)ನೇ ಉಪಪ್ರಕರಣದ (ಬಿ), (ಸಿ), (ಡಿ) ಮತ್ತು (ಇ) ಖಂಡಗಳ ಅಡಿಯಲ್ಲಿ ನಾಮ ನಿರ್ದೇಶನ ಹೊಂದಿದ ಉಪ-ವಿಭಾಗ ಜಾಗೃತ ಸಮಿತಿಯ ಪ್ರತಿಯೊಬ್ಬ ಸದಸ್ಯನು ಸರ್ಕಾರಿ ರಾಜ್ಯ ಪತ್ರದಲ್ಲಿ ಅವನ ನಾಮ ನಿರ್ದೇಶನವನ್ನು ಅಧಿಸೂಚಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಅಧಿಕಾರದಲ್ಲಿ ಇರತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾದ ಅನಂತರ, ತನ್ನ ಉತ್ತರಾಧಿಕಾರಿಯು ನಾಮ ನಿರ್ದೇಶನವನ್ನು ಮಾಡುವವರೆಗೆ ಅವನು ಅಧಿಕಾರದಲ್ಲಿ ಮುಂದುವರಿಯತಕ್ಕದ್ದು ಮತ್ತು ಪುನರ್ ನಾಮ ನಿರ್ದೇಶನಕ್ಕೆ ಸಹ ಅವನು ಅರ್ಹನಾಗಿರತಕ್ಕದ್ದು.

(2) (1)ನೇ ಉಪನಿಯಮದಲ್ಲಿ ಹೇಳಲಾದ ಪ್ರತಿಯೊಬ್ಬ ಸದಸ್ಯನೂ,-

(ಎ) ತನ್ನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರಿಗೆ ಬರಹದಲ್ಲಿ ನೋಟೀಸನ್ನು ಕೊಟ್ಟು ತನ್ನ ಅಧಿಕಾರ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡತಕ್ಕದ್ದು ಮತ್ತು ಅಂಥ ರಾಜೀನಾಮೆಯು ಸ್ವೀಕಾರವಾದ ಅನಂತರ, ಅವನು ತನ್ನ ಅಧಿಕಾರ ಸ್ಥಾನವನ್ನು ತೆರವು ಮಾಡಿದ್ದಾನೆ ಎಂದು ಭಾವಿಸತಕ್ಕದ್ದು.

(ಬಿ) (i) ಉಪ-ವಿಭಾಗ ಜಾಗೃತ ಸಮಿತಿಯ ಒಂದರ ನಂತರ ಒಂದರಂತೆ ಬಂದು ನಡೆಯುವ ಮೂರು ನಿರಂತರ ಸಭೆಗಳಿಗೆ ಸದರಿ ಸಮಿತಿಯ ಅಧ್ಯಕ್ಷನಿಂದ ತಾನು ಗೈರು ಹಾಜರಾಗಲು ಅನುಮತಿಯನ್ನು ಪಡೆಯದೇ ಹಾಜರಾಗಲು ತಪ್ಪಿದರೆ ಆ ಸದಸ್ಯನು ತನ್ನ ಅಧಿಕಾರ ಸ್ಥಾನವನ್ನು ಬಿಟ್ಟು ಕೊಟ್ಟಿದ್ದಾನೆ ಎಂದು ಭಾವಿಸತಕ್ಕದ್ದು.

ಆದರೆ, ತನ್ನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರಕ್ಕೆ ಅಂಥ ಸದಸ್ಯನು ಸಮಿತಿಯ ಒಂದರ ನಂತರ ಒಂದರಂತೆ ಬರುವ ಮೂರು ನಿರಂತರ ಸಭೆಗಳಿಗೆ ಹಾಜರಾಗಲು ಸಾಕಷ್ಟು ಕಾರಣಗಳಿಂದ ಅಡ್ಡಿ ಉಂಟಾಯಿತೆಂದು ಮನದಟ್ಟಾದರೆ, ಆ ಪ್ರಾಧಿಕಾರವು ಅವನಿಗೆ ಸದರಿ ಸದಸ್ಯತ್ವವನ್ನು ಪುನಃ ಕೊಡಬಹುದು.

(ii) ಕೆಳಗೆ ತಿಳಿಸಿದ ಯಾವುದೇ ಅನರ್ಹತೆಗಳಿಗೆ ಅವನು ಒಳಗಾದರೆ ಅವನು ತನ್ನ ಅಧಿಕಾರ ಸ್ಥಾನವನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕದ್ದು:

(1) ಅವನು ದಿವಾಳಿಯೆಂದು ನ್ಯಾಯಾಲಯದಿಂದ ನಿರ್ಣಯಿಸಲ್ಪಟ್ಟರೆ;

(2) ಸಕ್ಷಮ ನ್ಯಾಯಾಲಯವು ಅವನು ಅಸ್ವಸ್ಥ ಚಿತ್ತನೆಂದು ಘೋಷಿಸಿದ್ದರೆ;

(3) ಅವನ ನಾಮ ನಿರ್ದೇಶನವನ್ನು ಮಾಡಿದ ಪ್ರಾಧಿಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನು ಒಳಗೊಳ್ಳುವ ಅಪರಾಧಕ್ಕಾಗಿ ಅವನು ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಸಿ) ಅಂಥ ಸದಸ್ಯನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರವು ಯಾವ ಹಿತಾಸಕ್ತಿಯನ್ನು ಪ್ರತಿನಿಧಿಸಲು ಅವನನ್ನು ನಾಮ ನಿರ್ದೇಶನ ಮಾಡಲಾಗಿತ್ತೋ ಆ ಹಿತಾಸಕ್ತಿಯನ್ನು ಅವನು ಪ್ರತಿನಿಧಿಸುವುದು ಕೊನೆಗೊಂಡಿದೆಯೆಂದು ಅಭಿಪ್ರಾಯಪಟ್ಟರೆ, ಅದು ಅವನನ್ನು ಅವನ ಅಧಿಕಾರ ಸ್ಥಾನದಿಂದ ತೆಗೆದು ಹಾಕಬಹುದು;

ಆದರೆ, ಹಾಗೆ ಅಧಿಕಾರ ಸ್ಥಾನದಿಂದ ತೆಗೆದುಹಾಕುವುದನ್ನು ವಿಶ್ಲೇಷಿಸಿ ಕಾರಣವನ್ನು ತೋರಿಸುವುದಕ್ಕೆ ಅವನಿಗೆ ಸೂಕ್ತ ಅವಕಾಶವನ್ನು ಕೊಟ್ಟ ಹೊರತು, ಈ ಖಂಡದ ಅಡಿಯಲ್ಲಿ ಅಂಥ ಸದಸ್ಯನನ್ನು ಅವನ ಅಧಿಕಾರ ಸ್ಥಾನದಿಂದ ತೆಗೆದು ಹಾಕತಕ್ಕದ್ದಲ್ಲ.

(3) ಆಕಸ್ಮಿಕವಾಗಿ ತೆರವಾಗಿರುವ ಅಧಿಕಾರ ಸ್ಥಾನವನ್ನು ಭರ್ತಿ ಮಾಡಲು ನಾಮ ನಿರ್ದೇಶಿತನಾದ ಒಬ್ಬ ಸದಸ್ಯನು ತನ್ನ ಹಿಂದಿನ ಸದಸ್ಯನ ಉಳಿದಿದ್ದ ಅವಧಿಯವರೆಗೆ ಅಧಿಕಾರ ಸ್ಥಾನದಲ್ಲಿರತಕ್ಕದ್ದು.

**5. 6ನೇ ಪ್ರಕರಣದ 6ನೇ ಉಪಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರ**
**Prescribed Authority under Sub-section (6) of Section 6:**

6ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ಆ ಪ್ರಕರಣದ (4)ನೇ ಅಥವಾ (5)ನೇ ಉಪಪ್ರಕರಣದಲ್ಲಿ ನಿರ್ದೇಶಿಸಲಾದ ಯಾವುದೇ ಸ್ವತ್ತಿನ ಸ್ವಾಧೀನವನ್ನು ವಾಪಸು ಮಾಡಿಸುವುದಕ್ಕಾಗಿ ಇರುವ ಅರ್ಜಿಯನ್ನು ಮೊದಲನೆಯ ಅಥವಾ ಎರಡನೆಯ ದರ್ಜೆಯ ಜುಡಿಷಿಯಲ್ ಮ್ಯಾಜಿಸ್ಟ್ರೇಟನಿಗೆ ಇರುವ ಅಧಿಕಾರಗಳನ್ನು 21ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ವಹಿಸಲಾಗಿರುವ ಮತ್ತು ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಸದರಿ ಸ್ವತ್ತು ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ



ಇರುತ್ತದೋ ಅಥವಾ ಇದೆಯೆಂದು ನಂಬಲು ಅರ್ಜಿದಾರನಿಗೆ ಕಾರಣವಿರುತ್ತದೋ ಅಂಥ ಕಾರ್ಯಕಾರಿ ದಂಡಾಧಿಕಾರಿಗೆ ಸಲ್ಲಿಸತಕ್ಕದ್ದು.

ಆದರೆ, (1)ನೇ ಉಪನಿಯಮದಲ್ಲಿ ಹೇಳಲಾದ ಸ್ವತ್ತನ್ನು ವಾಪಸು ಕೊಡಿಸಬೇಕೆಂದು ಕೋರಿದ ಅರ್ಜಿಯನ್ನು ಸ್ವೀಕರಿಸಲು ಅಧಿಕಾರ ವ್ಯಾಪ್ತಿಯನ್ನುಳ್ಳ ಇಬ್ಬರು ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟರು ಎಂದರೆ, 21ನೇ ಪ್ರಕರಣದ 1ನೇ ಉಪಪ್ರಕರಣದ ಅಡಿಯಲ್ಲಿನ ಮೊದಲನೇ ದರ್ಜೆಯ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಹೊಂದಿರುವ, ಒಬ್ಬ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟನು ಮತ್ತು ಎರಡನೇ ದರ್ಜೆಯ ಜುಡಿಷಿಯಲ್ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಹೊಂದಿರುವ ಮತ್ತೊಬ್ಬ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟನು ಇದ್ದರೆ, ಎರಡನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಹೊಂದಿರುವ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

**6. 6ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕಾದ ಅವಧಿ**
**Time within which an Application under Sub-section (6) is to be made:**

6ನೇ ಪ್ರಕರಣದ (6)ನೇ ಉಪಪ್ರಕರಣದ ಅಡಿಯಲ್ಲಿ ಈ ಪ್ರಕರಣದ (4)ನೇ ಅಥವಾ (5)ನೇ ಉಪಪ್ರಕರಣದಲ್ಲಿ ಹೇಳಲಾದ ಯಾವುದೇ ಸ್ವತ್ತಿನ ಸ್ವಾಧೀನವನ್ನು ವಾಪಸು ಕೊಡಿಸುವುದಕ್ಕಾಗಿ ಈ ನಿಯಮಗಳು ಜಾರಿಗೆ ಬಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

**7. ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳನ್ನು ಕಾರ್ಯಗತಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಜಿಲ್ಲಾ ಜಾಗೃತ ಸಮಿತಿಗಳು ಇಟ್ಟುಕೊಂಡು ಬರಬೇಕಾದ ದಾಖಲೆಗಳು**
**Records to be maintained by District Vigilance Committees to ensure the Implementation of the Provisions of the Act and Rules:**

ಈ ಅಧಿನಿಯಮವನ್ನು ಮತ್ತು ನಿಯಮಗಳನ್ನು ಕಾರ್ಯಗತಗೊಳಿಸುವುದನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ, ಪ್ರತಿಯೊಂದು ಜಿಲ್ಲಾ ಜಾಗೃತ ಸಮಿತಿಯು ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಜೀತ ಕಾರ್ಮಿಕ ಪದ್ಧತಿಯಿಂದ ವಿಮೋಚಿತರಾದ ಜೀತ ವಿಮುಕ್ತ ವ್ಯಕ್ತಿಗಳ ಬಗ್ಗೆ ಈ ಕೆಳಕಂಡ ರಿಜಿಸ್ಟರುಗಳನ್ನು ಇಡತಕ್ಕದ್ದು, ಎಂದರೆ,–

(ಎ) ಜೀತ ವಿಮುಕ್ತರಾದ ಜೀತ ಕಾರ್ಮಿಕರ ಹೆಸರುಗಳು ಮತ್ತು ವಿಳಾಸಗಳನ್ನೊಳಗೊಂಡ ಒಂದು ರಿಜಿಸ್ಟರು;

(ಬಿ) ಜೀತ ವಿಮುಕ್ತನಾದ ಪ್ರತಿಯೊಬ್ಬ ಜೀತ ಕಾರ್ಮಿಕನ ವೃತ್ತಿ, ಕಸುಬು, ಮತ್ತು ಆದಾಯಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಒಳಗೊಂಡ ರಿಜಿಸ್ಟರು;

(ಸಿ) ಜೀತ ವಿಮುಕ್ತರಾದ ಜೀತದಾಳುಗಳು ಪಡೆಯುತ್ತಿರುವ ಪ್ರಯೋಜನಗಳು. ಎಂದರೆ, ಅದರಲ್ಲಿ ಈ ಮುಂದಿನವು ಸೇರಿರತಕ್ಕದ್ದು. ಭೂಮಿಯ ರೂಪದಲ್ಲಿ ಕೊಟ್ಟ ಪ್ರಯೋಜನ, ಕೃಷಿಗೆ ಬೇಕಾದ ಸಾಮಾಗ್ರಿಗಳು, ಕರಕುಶಲ ಕಲೆಯಲ್ಲಿ ಮತ್ತು ತತ್ಸಂಬಂಧಿತ ವೃತ್ತಿಗಳಲ್ಲಿ ತರಬೇತಿ, ಇವರಿಗೆ ಪ್ರತ್ಯೇಕವಾದ ವ್ಯತ್ಯಾಸವುಳ್ಳ ದರದಲ್ಲಿ, ಬಡ್ಡಿ ದರದಲ್ಲಿ ಸಾಲಗಳು, ಅಥವಾ ನಗರ ಮತ್ತು ಪಟ್ಟಣೇತರ ಪ್ರವೇಶಗಳಲ್ಲಿ ಉದ್ಯೋಗ ಇವುಗಳ ವಿವರಗಳನ್ನೊಳಗೊಂಡ ರಿಜಿಸ್ಟರು;

(ಡಿ) 6ನೇ ಪ್ರಕರಣ, (6)ನೇ ಉಪಪ್ರಕರಣ, 8ನೇ ಪ್ರಕರಣದ (2)ನೇ ಉಪಪ್ರಕರಣ ಮತ್ತು 9, 16, 17, 18, 19 ಮತ್ತು 20ನೇ ಪ್ರಕರಣಗಳ (2)ನೇ ಉಪ ಪ್ರಕರಣದ ಅಡಿಯಲ್ಲಿನ ವಿವರಗಳನ್ನು ಒಳಗೊಂಡ ರಿಜಿಸ್ಟರು.

* * *